written every day a letter saying that he is not able to attend the House. Yesterday he has written a letter. Today he has written a letter. For tomorrow too, he has written that he has not yet recouped and he will be unable to come and that he has requested the Hon'ble Minister for Home to deputies for him.

ಶ್ರೀ ಸಿದ್ಧಯ್ಯ ಕಾಶಿಮಠ (ಶಿರಹಟ್ಟಿ).—ಈಗ ಉಕ್ಕಿನ ಕಾರ್ಖಾನೆ ಸ್ಥಾಪನೆಯ ವಿಷಯ ಬೇರೆ ರಾಜ್ಯಗಳಲ್ಲೂ ಆಗಿರುವುದರಿಂದ, ಇಲ್ಲಿಯೂ ಬಂದು ಆ ವಿಷಯ ಮಾತನಾಡಬಹುದಲ್ಲವೇ ?

Mr. SPEAKER.—Coming back to the Supplementary Demands, I propose to allow, as I said yesterday a short time. I do not want anybody to raise a technical objection that 3½ hours allotted were not given. Yesterday it was mentioned by the Chief Whip of the Congress Party that they have not taken any portion out of the time allowed in order to see that there is no grievance on the part of the Opposition. That is something very appreciative. I appreciate it because I have been able to give time to the members of the Opposition.

Sri SIDDIAH KASHIMATH.—We have appreciated and we have also co-operated.

Mr. SPEAKER.—It may be for the purpose of facilitating, or out of regard for the members of the Opposition. So, I propose to allow only 15 or 20 minutes, and then allow a reply, if any, with regard to other points.

Sri C. J. MUCKANNAPPA (Sira).—I request the Hon'ble Speaker to permit me to speak for a minute about the cow slaughter...

Mr. SPEAKER.—It may not be today but tomorrow. Gopala Gowda, may kindly conclude in five minutes.

SUPPLEMENTARY AND ADDITIONAL DEMANDS FOR GRANTS FOR 1966-67 (SECOND INSTALMENT)

(Debate—continued)

† ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಸರಕಾರದವರು ಅನುಪೂರಕ ಅನುದಾನಗಳಿಗೆ ಸಂಬಂಧಪಟ್ಟ ಬೇಡಿಕೆಗಳ ಎರಡನೇ ಕಂತನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಸುಮಾರು ನಾಲ್ಕು ಕೋಟಿ ರೂಪಾಯಿ ಇದರಲ್ಲಿ ಕೇಳಿದ್ದಾರೆ. ಒಂದು ಮಾತನ್ನು ನಾವು ಇವತ್ತು ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು. ರಾಜ್ಯಾಂಗದನ್ವಯ ಈ ಸಭೆಗೆ ಸಾರ್ವಜನಿಕ ಹಣದ ಮೇಲೆ ಕಾನೂನು ರೀತ್ಯಾ ವಿಶೇಷ ಹತೋಟಿ ಇದೆ. ಸಾರ್ವಜನಿಕ ಲೆಕ್ಕಪತ್ರ ತನಿಖೆ ಮಾಡತಕ್ಕಂಥ ಸಮಿತಿ, ಅಂದಾಜು ಸಮಿತಿ, ಆಡಿಟರ್ ಜನರಲ್, ಫೆನಾನ್ಸ್ ಡಿಪಾರ್ಟ್‌ಮೆಂಟ್ ಹೀಗೆ ಎಷ್ಟೋ ವ್ಯವಸ್ಥೆ ಕಾನೂನಿನಲ್ಲಿ ಮಾಡಿದ್ದಾರೆ. ಆದರೆ ಯಾವುದನ್ನು ನೋಡಿದರೂ ಸರಕಾರ ಹೊಸ ಯೋಜನೆಗಳು ಮತ್ತು ಹೊಸ ಸೇವೆಗಳು ನ್ಯೂ ಸರ್ವಿಸಿಸ್‌ಗಾಗಿ ಹಣ ತೆಗೆದುಕೊಳ್ಳುವುದನ್ನು ನೋಡುತ್ತೇವೆ. ಕಂಟಿನ್‌ಜೆನ್ಸಿ ಹಣವನ್ನು ಒಂದು ಕೋಟಿಯಿಂದ ನಾಲ್ಕು ಕೋಟಿಗೆ ಏರಿಸಿರುವುದರಿಂದ ನಾಲ್ಕು ಕೋಟಿ ರೂಪಾಯಿ ಖರ್ಚು ಮಾಡಿ ನೀವು ಅದನ್ನು ಕೊಡಿ ಎಂದು ಹೇಳಲು ಸರಕಾರಕ್ಕೆ ಅವಕಾಶ ಮಾಡಿಕೊಟ್ಟಂತಾಗಿದೆ. ಇದರ ಬಗ್ಗೆ ಮಾನ್ಯ ಸಭೆ ವಿಚಾರ ಮಾಡಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ.

(ಶ್ರೀ ಎಸ್. ಗೋಪಾಲಗೌಡ)

ಸರಕಾರ ಖಾಸಗಿ ಕೈಗಾರಿಕೆಗಳಿಗೆ ನೆರವು ನೀಡುವಂತೆ ಒಂದು ಕೆಲಸ ಮಾಡಿದ್ದಾರೆ. ಇದರಲ್ಲಿ ಗುಲಬರ್ಗ ಎಂ. ಎಸ್. ಕೆ. ಮಿಲ್ಸ್ ಎಂದು ಒಂದಿದೆ. ಇದಕ್ಕೆ 4·5 ಲಕ್ಷ, 60 ಲಕ್ಷ, 9,073 ರೂಪಾಯಿ, 40 ಲಕ್ಷ 15 ಲಕ್ಷ ಇಷ್ಟು ಹಣ ಕೊಟ್ಟಿದ್ದಾರೆ. ಈಚೆಗೆ ನಾನು ಗುಲಬರ್ಗಕ್ಕೆ ಹೋಗಿದ್ದೆ. ನಾನು ಅಲ್ಲಿ ಕೇಳಿರುವ ವಿಚಾರದಲ್ಲಿ ಸರಿಪಡಿಸದಿದ್ದರೆ ಪುನಃ ಈ ಮಿಲ್ಲು ನಿಂತು ಹೋಗುವ ಸ್ಥಿತಿಗೆ ಬರಬಹುದು ಎಂದು. 26 ನೇ ಪುಟದಲ್ಲಿ ಹೀಗೆ ಇದೆ :—

In the meantime, the Managing Director requested for the grant of an *ad hoc* loan of Rupees fifteen lakhs immediately so as to enable him to continue in the Mills ಯಾವುದಾದರೂ ಕೈಗಾರಿಕೆ ಹಣಕಾಸಿನ ತೊಂದರೆಯಿಂದ ಅಥವಾ ಬೇರೆ ತೊಂದರೆಯಿಂದ ನಿಂತು ಹೋಗುವ ಪರಿಸ್ಥಿತಿ ಇದ್ದರೆ ಸರಕಾರ ಸಹಾಯ ಮಾಡಬೇಕು, ಅವಶ್ಯ ಬಿದ್ದರೆ ಅಂಥ ಕೈಗಾರಿಕೆಯನ್ನು ತಾವೇ ತೆಗೆದುಕೊಂಡು ನಡೆಸಿಕೊಂಡು ಹೋಗಬೇಕು ಒಳ್ಳೇ ರೀತಿಯಲ್ಲಿ ಎಂಬುದು ನಮ್ಮ ನೀತಿಯೇ ? ಹಣ ಕೊಡತಕ್ಕದ್ದನ್ನು ಸ್ವಾಗತಿಸುತ್ತಾ ಕೈಗಾರಿಕೆಯಲ್ಲಿ ನಷ್ಟವಾಗುವುದನ್ನು ಸರಿಪಡಿಸುವುದಕ್ಕೆ, ಸುಸೂತ್ರವಾಗಿ ನಡೆಯುವುದಕ್ಕೆ ಏನೂ ಕ್ರಮ ತೆಗೆದುಕೊಳ್ಳದೆ ಕೋಟ್ಯಾಂತರ ರೂಪಾಯಿ ಹಣವನ್ನು ಆ ಮಿಲ್ಲಿಗೆ ಕೊಟ್ಟಿದ್ದೀರಿ. ಈ ಹಣ ವಾಪಸ್ಸು ಪಡೆಯುವುದು ಬಹಳ ಕಷ್ಟ ಎಂದು ಕಾಣುತ್ತದೆ. ಸರಕಾರ ಇದನ್ನು ವಿಚಾರ ಮಾಡಬೇಕು. ಅಲ್ಲಿ ಕೆಲಸ ಹೇಗೆ ನಡೆದಿದೆ ಅಂದರೆ, 80 ರೂಪಾಯಿ ಸಂಬಳ ತೆಗೆದುಕೊಳ್ಳುವವನು 400 ರೂಪಾಯಿ ಸಂಬಳ ಮಟ್ಟಕ್ಕೆ ಹೋಗಿದ್ದಾನೆ. ಅಲ್ಲಿ ಕಾಂಗ್ರೆಸ್ಸಿನವರು ಅನೇಕ ಜನರನ್ನು ನೇಮಿಸಿದ್ದಾರೆ. ಬೇಕಾದಷ್ಟು ಕಾರ್ಮಿಕರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಬೇಕಾದಷ್ಟು ಭ್ರಷ್ಟಾಚಾರ ನಡೆಯುತ್ತಿದೆ. ಮಿಲ್ಲು ಸರಿಯಾಗಿ ನಡೆಯಬೇಕು ಎಂಬುದಕ್ಕೆ ಆಸಕ್ತಿ ಇಲ್ಲ. ಈ ರೀತಿ ವರದಿ ಬಂದಿದೆ. ಮ್ಯಾನೇಜಿಂಗ್ ಡೈರೆಕ್ಟರರು ಸಹ ವರದಿ ಕೊಟ್ಟಿದ್ದಾರೆಂದು ಕೇಳಿದ್ದೇನೆ. ಇದನ್ನು ಸರಿಪಡಿಸುವುದಕ್ಕೆ ಸರಕಾರ ಗಮನ ಕೊಡದೇ ಹೋದ ಪಕ್ಷದಲ್ಲಿ ಸಾರ್ವಜನಿಕ ಹಣವನ್ನು ಇಂಥ ಮಿಲ್ಲುಗಳಿಗೆ ಹಾಕುವುದು ಬಹಳ ಅಪಾಯಕರ. ಸರಕಾರದ ಬೊಕ್ಕಸವನ್ನು ಸೂರೆ ಮಾಡತಕ್ಕಂಥ ಕ್ರಮವಾಗುತ್ತದೆ, ಬೆಂಗಳೂರಿನಲ್ಲಿಯ ಮಿನರ್ವ ಮಿಲ್ಸ್ ಮುಚ್ಚಿ ಎಂಟು ತಿಂಗಳಾಯಿತು. ಏಳು ಸಾವಿರ ಕಾರ್ಮಿಕರು ನಿರುದ್ಯೋಗಿಗಳಾಗಿ ಇಂದು ಬೆಂಗಳೂರಿನಲ್ಲಿ ಭಿಕ್ಷೆ ಬೇಡುವ ಸ್ಥಿತಿಯಲ್ಲಿದ್ದಾರೆ. ಗುಲಬರ್ಗ ಮಿಲ್ಲಿಗೆ ತೋರಿಸಿದ ಔದಾರ್ಯ ರಾಜ್ಯ ಸರಕಾರವು ಈ ಮಿಲ್ಲಿಗೆ ಏತಕ್ಕೆ ತೋರಿಸಲಿಲ್ಲ ಎಂಬುದು ಒಂದು ದೊಡ್ಡ ಪ್ರಶ್ನೆ ಇದೆ. ಇದನ್ನು ವಿಚಾರ ಮಾಡಬೇಕು. ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್ ಉತ್ಪಾದನೆ ನಿಲ್ಲಿಸಿ ಸುಮಾರು ಆರೇಳು ತಿಂಗಳಾಯಿತು. ಸರಕಾರ ಐದು ಲಕ್ಷ ರೂಪಾಯಿ ಗ್ಯಾರಂಟೀ ಕೊಡುತ್ತೇವೆಂದು ಹೇಳಿದರೂ ಕೂಡ ಇವತ್ತು ಮಿಲ್ಲು ತೆಗೆದು ಕಾರ್ಮಿಕರಿಗೆ ಸಂಬಳ ಕೊಡುವ ಸ್ಥಿತಿಯಲ್ಲಿ ಅದು ಇಲ್ಲ. ಇವತ್ತು ಕೊಡುವುದಕ್ಕೆ ಸರಕಾರದಲ್ಲಿ ಹಣ ಇಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. ಸಹಾಯ ಮಾಡುವ ಸ್ಥಿತಿಯಲ್ಲಿ ಸರಕಾರ ಇಲ್ಲ. ರಿಜರ್ವ್ ಬ್ಯಾಂಕಿನಿಂದ ಓವರ್ ಡ್ರಾಫ್ಟ್ ತಂದು ಕಾಲ ಹಾಕುತ್ತಿದ್ದಾರೆ. ಕೇಂದ್ರ ಸರಕಾರದವರು ಕೆಲವು ಮಿಲ್ಸ್ ತೆಗೆದುಕೊಂಡಿದ್ದಾರೆ. ಇದರಿಂದ ಅವರಿಗೆ ಮೂರು ಕೋಟಿ ರೂಪಾಯಿ ನಷ್ಟವಾಗಿದೆ. ಮೂರನೇ ಪಂಚವಾರ್ಷಿಕ ಯೋಜನೆ ಮುಗಿದು ನಾಲ್ಕನೇ ಪಂಚವಾರ್ಷಿಕ ಯೋಜನೆ ಆರಂಭವಾಗುವ ಸಮಯದಲ್ಲಿ ಯೋಚನೆ ಮಾಡುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಹಣ ಕಾಸಿನ ತೊಂದರೆಗೀಡಾದ ಬಾಗಲಕೋಟೆ ಸಿಮೆಂಟ್ ಫ್ಯಾಕ್ಟರಿಗೆ ಸುಮಾರು ಹತ್ತು ಲಕ್ಷ ರೂಪಾಯಿವರೆಗೆ ಷೇರು ಕೊಂಡುಕೊಳ್ಳುವ ಮೂಲಕ ಸಹಾಯ ಸರಕಾರ ಮಾಡಿದ್ದಾರೆ. ಅದು ಸರಿಯೋ ಅಲ್ಲವೊ ಗೊತ್ತಿಲ್ಲ. ಇವತ್ತು ಸರಕಾರದವರು ತಮಗೆ ಬೇಕಾದಂಥವರಿಗೆ ಹಣ ಒದಗಿಸುವುದು ಅಥವಾ ತಮಗೆ ಬೇಡಾದವರಿಗೆ ಹಣ ಒದಗಿಸದೇ ಇರುವುದು ಈ ನೀತಿ ಸರಿಯಲ್ಲ. ಒಂದು ಸರಿಯಾದ ನೀತಿಯ ಆಧಾರದ ಮೇಲೆ ಹಣ ಒದಗಿಸಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯ ಪೂರ್ವಕ ಹೇಳುತ್ತೇನೆ.

ಇನ್ನು ಪ್ರಸಾರಾಂಗ ಅಂದರೆ, ಸರಕಾರದ ಪಬ್ಲಿಸಿಟಿ ಮತ್ತು ಇನ್‌ಫರ್‌ಮೇಷನ್ ಇಲಾಖೆ ಬಗ್ಗೆ ನಿನ್ನೆಯ ದಿವಸ ಸದಸ್ಯರು ಸಾಕಷ್ಟು ಟೀಕೆ ಮಾಡಿದ್ದಾರೆ. ಅಡ್ವರ್‌ಟೈಜ್‌ಮೆಂಟ್ಸ್ ಕೊಡುವಾಗ್ಗೆ ಸರಕಾರ ಒಂದು ಸರಿಯಾದ ನೀತಿಯನ್ನು ಅನುಸರಿಸಿಲ್ಲ. ಹೊಗಳುಭಟ್ಟರಿಗೆ ಭಟ್ಟಂಗಿಗಳಿಗೆ ಅಂದರೆ, ಸರಕಾರವನ್ನು ಪ್ರಶಂಸೆ ಮಾಡತಕ್ಕಂಥವರಿಗೆ ಮಾತ್ರ ಕೊಟ್ಟಿದ್ದಾರೆ ಬಾಕಿಯವರಿಗೆ ಕೊಟ್ಟಿಲ್ಲ. ಇದಕ್ಕೆ ಉದಾಹರಣೆ ಸಾವಿರಾರು ಹೇಳಬಹುದು. ಈ ನೀತಿ ಸರಿಯಾದುದಲ್ಲ. ಸ್ವಂತ ದುಡ್ಡನ್ನು ಅವರು ಕೊಟ್ಟುಕೊಳ್ಳಬಹುದು. ಯಾರು ಹೆಚ್ಚು ಪಬ್ಲಿಸಿಟಿ ತೆಗೆದುಕೊಳ್ಳಬೇಕೆಂದಿದ್ದಾರೆ ಅವರ ಸ್ವಂತ ದುಡ್ಡು ಏನಾದರೂ ಇದ್ದರೆ, ದುಡಿದು ಅವರ ಅಪ್ಪನೋ, ಯಾರಾದರೂ ಮನೆಯವರು ತಂದು ಹಾಕಿರುವುದು ಇದ್ದರೆ ಅದನ್ನು ಕೊಟ್ಟು ಫೋಟೋ ಹಾಕಿಸಿಕೊಂಡು,

ತಮಟೆಯನ್ನು ಬಡಿಸಿಕೊಳ್ಳಲಿ. ಸಾರ್ವಜನಿಕ ಬೊಕ್ಕಸದಿಂದ ಕೊಡುವ ಹಣ ಮಂತ್ರಿಗಳು ತಮಟೆ ಹೊಡೆಸಿಕೊಳ್ಳುವುದಕ್ಕಲ್ಲ, ರಾಜ್ಯದ ವಿಷಯಗಳನ್ನು ಹೇಳುವುದಕ್ಕೆ ಎಂದು ಇದನ್ನು ಕೊಟ್ಟಿರುವುದು.

ಸ್ವಾಮಿ, ಬಜೆಟ್ಟಿನಲ್ಲಿ ಪ್ರಚಾರ ಕಾರ್ಯಕ್ಕಾಗಿ 10 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಈ ಕೆಲಸಕ್ಕೆ 10 ಲಕ್ಷ ರೂಪಾಯಿ ಸಾಕು. ಎಲ್ಲರಿಗೂ ಉದಾರವಾಗಿ ಪ್ರಸಾರದ ಕೆಲಸಕ್ಕೆಂದು ಹಂಚಿದರೂ, ಬಾಲ ಬಡಿಯುವವರಿಗೆಲ್ಲರಿಗೂ ಕೊಟ್ಟರೂ ಇನ್ನೂ ಸ್ವಲ್ಪ ಉಳಿಯುತ್ತದೆ. ಇದಕ್ಕೆ ಒದಗಿಸಿದ್ದ 10 ಲಕ್ಷ ರೂಪಾಯಿಗಳಲ್ಲಿ 9,85,000 ರೂಪಾಯಿಗಳು ಈಗಾಗಲೇ ಖರ್ಚಾಗಿ ಇನ್ನು 15,000 ರೂಪಾಯಿಗಳು ಮಾತ್ರ ಉಳಿದಿವೆ. ಅದಕ್ಕಾಗಿ ಈಗ ನಾವು 13 ಲಕ್ಷ ರೂಪಾಯಿ ಕೇಳುತ್ತಿದ್ದೇವೆ ಎಂದು ಹೇಳಿದ್ದಾರೆ. ವರ್ಷಕ್ಕೆ ಕೊಡುವಂಥ 10 ಲಕ್ಷ ರೂಪಾಯಿ ಮೀರಿ ಖರ್ಚು ಮಾಡಿ ಮತ್ತೆ 13 ಲಕ್ಷ ರೂಪಾಯಿ ಒಂದು ದೇಶದಲ್ಲಿ ಬರೀ ಪ್ರಚಾರಕ್ಕೆ ಬೇಕು ಎಂಥ ಪ್ರಚಾರ, ಯಾರಾದರೂ ಮರ್ಯಾದಸ್ಥರು ನಾಚಿಕೆ ಪಡಬೇಕು ಅಂಥ ಪ್ರಚಾರ. ಇದನ್ನು ಯಾರು ಅಚ್ಚು ಹಾಕಿಸುತ್ತಾರೆಯೋ ಯಾರು ಬರೆಯುತ್ತಾರೆಯೋ ಅವರವರೇ ಓದಬೇಕು. ಪರ ರಾಜ್ಯಗಳಿಗೆ ನಮ್ಮ ರಾಜ್ಯದಲ್ಲಿ ಏನಾಗುತ್ತದೆ ಎನ್ನುವುದು ಗೊತ್ತಾಗುವುದಿಲ್ಲ, ಕೇಂದ್ರ ಸರ್ಕಾರಕ್ಕೆ ಏನೂ ತಿಳಿಯುವುದಿಲ್ಲ. ವಿದೇಶಗಳಲ್ಲಿ ಪ್ರಚಾರ ಮಾಡುವುದಕ್ಕೆ ಬೇರೆ ಶಾಖೆ ಇದೆ. ಈ ನೀತಿಯನ್ನು ನಾನು ಕಟುವಾಗಿ ವಿರೋಧಿಸುತ್ತೇನೆ, ಮಾತ್ರವಲ್ಲ ಎಲ್ಲ ಸಣ್ಣ ಪತ್ರಿಕೆಗಳಿಗೂ ಅವರ ಧೋರಣೆ ಏನೇ ಇರಲಿ, ಹೊಗಳುವವರು ತೆಗಳುವವರು ಯಾರೇ ಇರಲಿ, ಅವರಿಗೆ ಸಾಕಷ್ಟು ಪ್ರಚಾರದ ವರಮಾನ ಬರುವಂಥ ಯೋಗ್ಯ ರೀತಿಯ ನೀತಿಯನ್ನು ಅನುಸರಿಸಬೇಕು.

ಇನ್ನೊಂದು ವಿಚಾರ. ಹತ್ತು ವರ್ಷಗಳಲ್ಲಿ, 1956 ರಿಂದ 1966 ರ ವರೆಗೆ ಆಗಿರುವ ಪ್ರಗತಿಯನ್ನು ಸೂಚಿಸುವಂಥ ಒಂದು ಪುಸ್ತಕವನ್ನು ಬರೆದಿದ್ದಾರಂತೆ. ಅದು ಇನ್ನೂ ನನ್ನ ಕೈಗೆ ಸಿಕ್ಕಿಲ್ಲ. ಅದು ಇಂಗ್ಲಿಷ್ ಮತ್ತು ಕನ್ನಡದಲ್ಲಿದೆ, ದೊಡ್ಡ ಗ್ರಂಥವಾಗಿದೆ ಎಂದು ಕೇಳಿದ್ದೇನೆ. ಅದಕ್ಕೆ ಒಂದು ಲಕ್ಷ ರೂಪಾಯಿ ಅಡ್ವಾನ್ಸ್ ಕೊಟ್ಟಿದ್ದಾರೆ ಎಂದು ಕೇಳಿದ್ದೇನೆ. ಎಂಥ ಪುಸ್ತಕ ಇದು, ಎಷ್ಟು ಪ್ರತಿಗಳನ್ನು ಅಚ್ಚು ಹಾಕಿಸುತ್ತಾರೆ, ಒಂದು ಲಕ್ಷ ರೂಪಾಯಿ ಏಕೆ ಕೊಟ್ಟಿದ್ದಾರೆ ಮತ್ತು ಯಾರು ಯಾರಿಗೆ ಯಾವ ಸಂಭಾವನೆ ಕೊಡುವುದಕ್ಕೆ ಕೊಟ್ಟಿದ್ದಾರೆ ಎನ್ನುವುದನ್ನು ನಾನು ತಿಳಿದುಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಗುಲ್ಬರ್ಗ ಡಿವಿಜನ್ನಿನಲ್ಲಿ ಲೆಕ್ಕಪತ್ರಗಳನ್ನಿಡುವ ಕೆಲಸಕ್ಕೆ ಹಣವನ್ನು ಕೇಳಿದ್ದಾರೆ. ಎರಡು ಲಕ್ಷ ಖಾತೆಗಳ ಲೆಕ್ಕವನ್ನು ಇಡಲು, ಅವರು ಸಾಲ ತೆಗೆದುಕೊಂಡಿರುವ ಲೆಕ್ಕಗಳನ್ನು ನೋಡಿಕೊಳ್ಳುವುದಕ್ಕೆ ಒಂದು ಯಂತ್ರವನ್ನು ಹಾಕುತ್ತೇವೆ. ಅದಕ್ಕೆ ಹಣ ಬೇಕು ಎಂದು ಕೇಳಿದ್ದಾರೆ. ಈ ದೇಶದಲ್ಲಿ ಜನ ಉದ್ಯೋಗವಿಲ್ಲದೆ ಬೀದಿ ಬೀದಿ ಅಲೆಯುತ್ತಿರುವ ಕಾಲದಲ್ಲಿ ಯಾಂತ್ರೀಕರಣ ಮಾಡತಕ್ಕಂಥ ಯಾವುದೇ ಹೆಜ್ಜೆ ತಪ್ಪು ಎಂದು ನಾವು ಅನೇಕ ಸಲ ಹೇಳಿದ್ದೇವೆ. ಜೀವ ವಿಮಾ ಕಾರ್ಪೊರೇಷನ್‌ನಲ್ಲಿ ಇಲೆಕ್ಟ್ರಾನಿಕ್ ಕಂಪ್ಯೂಟರ್ಸ್ ಹಾಕುತ್ತಿದ್ದಾರೆ. ಅದೇ ರೀತಿ ನಮ್ಮ ಸರ್ಕಾರದವರು ಕಚೇರಿಗಳಲ್ಲಿ ಕೆಲಸ ಮಾಡುವುದಕ್ಕೆ ಇವತ್ತು ಬ್ರಾಡ್ಮ ಕಂಪೆನಿಯಿಂದ ಯಂತ್ರಗಳನ್ನು ಹಾಕಿಸುತ್ತಿದ್ದಾರೆ. ದೇಶದಲ್ಲಿ ಅಸಂಖ್ಯಾತ ವಿದ್ಯಾವಂತರು ಕೂಡ ನಿರುದ್ಯೋಗಿಗಳಾಗಿ ಇರುವಾಗ ಕಾರಕೂನರ ಸಂಖ್ಯೆಯನ್ನು ಕಡಮೆ ಮಾಡಿ ಲಕ್ಷಾಂತರ ರೂಪಾಯಿಗಳನ್ನು ಯಂತ್ರಗಳಿಗಾಗಿ ಖರ್ಚು ಮಾಡುವುದು ಅವಿವೇಕಯುತವಾದ ಮಾರ್ಗ ಎಂದು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸೊಸೈಟಿಗಳ ಬಗ್ಗೆ ಹೇಳಬೇಕು ಎಂದರೆ, ಸೊಸೈಟಿಗಳ ವಿಚಾರವನ್ನು ನಾವು ನೋಡುತ್ತಿದ್ದೇವೆ. ಎತ್ತುವಳಿ ಬಗ್ಗೆ ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಎತ್ತುವಳಿ ಹೇಗೆ ನಡೆದಿದೆ ಎನ್ನು, ಮಾನ್ಯ ಆಹಾರ ಸಚಿವರು ಯಾವ ರೀತಿ ಹಣವನ್ನು ಹತೋಟಿ ಮಾಡಿದ್ದಾರೆ, ಅದನ್ನು ಹಂಚಿರುವ ಸಹಕಾರ ಸಂಘಗಳು ಯಾವ ರೀತಿ ಕೆಲಸ ಮಾಡಿವೆ ಇವುಗಳನ್ನೆಲ್ಲ ಕೂಲಂಕಷವಾಗಿ ವಿಚಾರ ಮಾಡಬೇಕು. ಈಗ ಸಮಯವಿಲ್ಲದೆ ಇರುವುದರಿಂದ ನಾನು ಅದರ ಬಗ್ಗೆ ಏನೂ ಹೇಳುವುದಿಲ್ಲ. ಒಟ್ಟಿನಲ್ಲಿ ಕೆಲವು ಮಾತುಗಳನ್ನು ಹೇಳುತ್ತೇನೆ.

ಸಾರ್ವಜನಿಕ ಹಣ ಈ ಸರ್ಕಾರದ ಕೈಯಲ್ಲಿ ದುರುಪಯೋಗವಾಗುತ್ತಿದೆ. ಎಷ್ಟೇ ರಾಜ್ಯಾಂಗದತ್ತವಾದ ಹತೋಟಿ ಕ್ರಮಗಳಿದ್ದರೂ ಕೂಡ ಆ ಕ್ರಮಗಳನ್ನು ನಿರ್ಲಕ್ಷಿಸಿ, ಉಲ್ಲಂಘಿಸಿ, ಶಾಸನ ಸಭೆಯ ತೀರ್ಮಾನಗಳನ್ನು ಅಲ್ಲಗಳೆದು ಸರ್ಕಾರದವರು ಈ ಹಣ ತಮ್ಮದೇ ಹಣವೋ ಎನ್ನುವ ರೀತಿಗಿಂತ ಹೆಚ್ಚಾಗಿ ಸಾರ್ವಜನಿಕ ಹಣವನ್ನು ದುರುಪಯೋಗಪಡಿಸಿದ್ದಾರೆ. ಇದರ ಬಗ್ಗೆ ಸರ್ಕಾರದವರು ಬಂದಿರುವ ದೂರುಗಳ ಬಗ್ಗೆ, ಮಾನ್ಯ ಸದಸ್ಯರು ಈ ಸಭೆಯಲ್ಲಿ ಮಾಡಿದಂಥ, ಎತ್ತಿದಂಥ ಆಪಾದನೆಗಳ ಬಗ್ಗೆ, ಪಬ್ಲಿಕ್ ಅಕೌಂಟ್ಸ್ ಸಮಿತಿಯವರು ಜವಾಬ್ದಾರಿಯಿಂದ ಮಾಡಿರತಕ್ಕ ದೂರುಗಳ ಬಗ್ಗೆಯಾದರೂ ಅವರಿಗೆ ವ್ಯವಧಾನ ಸಿಕ್ಕಿ, ಕಾಲ ಸಿಕ್ಕಿ ವಿಚಾರಣೆಗಳನ್ನು ನಡೆಸಿ, ಮುಂದೆ ಈ

(ಶ್ರೀ ಎಸ್. ಗೋಪಾಲಗೌಡ)

ರೀತಿ ಹಣದ ದುರುಪಯೋಗವಾಗದಂತೆ ಒಂದು ವ್ಯವಸ್ಥೆ ಮಾಡಬೇಕು ಎಂದು ಸರ್ಕಾರವನ್ನು ನಾನು ಕೇಳಿಕೊಳ್ಳುತ್ತೇನೆ ಸ್ವಾಮಿ.

ಇವತ್ತು ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಲ್ಲ, ಹಣಕಾಸಿನ ಮಂತ್ರಿಗಳೂ ಇಲ್ಲ. ಅವರು ಹೇಳಬಹುದು, ನಾವು ವಿಚಕ್ಷಣತೆಯಿಂದ ಹಣಕಾಸನ್ನು ಖರ್ಚು ಮಾಡಿದ್ದೇವೆ, ಇದರಲ್ಲಿ ಯಾವುದೇ ದುರುಪಯೋಗದ ಪ್ರಶ್ನೆ ಬರುವುದಿಲ್ಲ ಎಂದು. ಈ ಮಾತನ್ನು ನಾನು ಹೇಳುವಾಗ ನನಗೆ ಬಹಳ ಆಶ್ಚರ್ಯವೆನಿಸುತ್ತದೆ ಇವರು ಬಹುಶಃ ನಿಜವನ್ನು ಆಡುವುದನ್ನು ಮರೆತು ಬಿಟ್ಟಿದ್ದಾರೆಯೋ ಏನೋ ಎಂದು ಅನ್ನಿಸುತ್ತದೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ (ತಿಪಟೂರು).—ಸ್ವಾಮಿ, ನಾನು ಒಂದೆರಡು ವಿಷಯ ಮಾತ್ರ ತೆಗೆದುಕೊಂಡು ಮಾತನಾಡುತ್ತೇನೆ. ಪ್ರಜಾಪ್ರಭುತ್ವದಲ್ಲಿ ಪ್ರಚಾರ ಶಾಖೆ ಹೇಗಿರಬೇಕು ಎನ್ನುವುದನ್ನು ನಿನ್ನೆ ಹಣಕಾಸಿನ ಸಚಿವರು ಬಹಳ ಚೆನ್ನಾಗಿ ವಿವರಿಸಿದರು. ಅಧಿಕಾರದಲ್ಲಿರುವ ಪಕ್ಷದವರ ಫೋಟೋಗಳನ್ನು ಅಧಿಕಾರಿಗಳಾದವರು ಒಂದು ರೀತಿಯ ಭಯದಿಂದ ಹಾಕುತ್ತಾರೆಯೇ ವಿನಾ ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷಗಳವರು ಹೇಳುವ ವಿಷಯಗಳನ್ನು, ಅವರು ಈ ಮಾನ್ಯ ಸಭೆಯಲ್ಲಿ ಹೇಳುವ ವಿಷಯಗಳನ್ನು ಹಾಕುವುದಿಲ್ಲ. ಅವರ ಫೋಟೋಗಳಿನ್ನಂತೂ ಹಾಕುವುದೇ ಇಲ್ಲ. ಸರ್ಕಾರದ ಬೊಕ್ಕಸದಿಂದ ಇಷ್ಟು ಹಣವನ್ನು ಖರ್ಚು ಮಾಡುವಾಗ ಎದುರು ಪಕ್ಷದವರ ಫೋಟೊ ಎಷ್ಟು ಹಾಕಿದ್ದಾರೆ, ಏನು ಹಾಕಿದ್ದಾರೆ ಎನ್ನುವುದನ್ನು ತೋರಿಸಲಿ. ಶ್ರೀ ಅಶೋಕ ಮೆಹತಾ ಅವರು ಮೊದಲು ನಮ್ಮ ಪಕ್ಷದ ಮೀಟಿಂಗ್‌ಗಳಿಗಾಗಿ ಅನೇಕ ಸಲ ಹಿಂದೆ ಬರುತ್ತಿದ್ದರು. ಅವರು ವಿಮಾನದಲ್ಲಿ ಬರುವಾಗ ನಾವುಗಳು ಅವರನ್ನು ಎದುರುಗೊಂಡು ಅಲ್ಲಿರುವ ಒಂದು ಟ್ಯಾಕ್ಸಿಯನ್ನು ನೋಡಿ ಬಾಡಿಗೆಗೆ ಮಾತನಾಡಿ ಅವರನ್ನು ಕರೆದುಕೊಂಡು ಬರುತ್ತಿದ್ದೆವು. ಆಗ ಬೇರೆಯವರು ಯಾರೂ ಆ ಕಡೆ ಸುಳಿಯುತ್ತಿರಲಿಲ್ಲ. ಅವರು ಪ್ಲಾನಿಂಗ್ ಕಮಿಷನ್ನಿನ ಡೆಪ್ಯೂಟಿ ಚೇರ್‌ಮನ್ ಆಗಿ ಬಂದರೆ ಅವರ ಹಿಂದೆ ಮುಂದೆ ಕ್ಯಾಮರಾಗಳು ಇರುವುದನ್ನು ನೋಡಿ ಅವರಿಗೆ ದಿಗ್ಭ್ರಾಂತಿ ಆಯಿತು. ಅವರಿಗೆ ಹಾಕಲು ಎರಡು ಲಾರಿ ಹೂವಿನ ಹಾರಗಳು ಬಂದವು. ನಮ್ಮ ಪ್ರಚಾರ ಶಾಖೆ ಹೇಗೆ ಇರಬೇಕು ಎನ್ನುವುದನ್ನು ನೋಡಿಕೊಳ್ಳಿ.

ಶ್ರೀ ಡಿ. ದೇವರಾಜ ಅರಸ್ (ಕಾರ್ಮಿಕ ವಸತಿ ಮತ್ತು ಸಾರಿಗೆ ಶಾಖೆಗಳ ಮಂತ್ರಿಗಳು).—ಜೇನು ಇದ್ದ ಕಡೆ ಇರುವೆಗಳು.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ನಾನೂ ಅದನ್ನೇ ಹೇಳುತ್ತಿರುವುದು. ನಿಮ್ಮ ಪ್ರಚಾರಕ್ಕೆ ಇದನ್ನು ಉಪಯೋಗಿಸಿಕೊಳ್ಳಬೇಡಿ.

2-30 P.M.

ನೀವು ಪ್ರಚಾರ ಶಾಖೆಯನ್ನು ಚುನಾವಣಾ ಪ್ರಚಾರಕ್ಕೆ ಉಪಯೋಗಿಸಿಕೊಳ್ಳುವಂತೆ ಕಾಣುತ್ತದೆ. ಬರೀ ಫೋಟೋಗಳನ್ನು ತೆಗೆಯುವುದು ಅವರ ಕೆಲಸವೆಂದು ಕಾಣುತ್ತದೆ. ಮರಗಳ ಸಂಖ್ಯೆಯೇ ಕಡಿಮೆಯಾಗಿರುವ ಕಡೆ ಇರುವ ಮಾವಿನಮರ ಕಡಿದು ಮಂತ್ರಿಗಳು ಬರುವರೆಂದು ತೋರಣ ಕಟ್ಟಲು ಉಪಯೋಗಿಸಿಕೊಂಡಿದ್ದಾರೆ, ಎಲ್ಲಿ ನೋಡಿದರೂ ಚಪ್ಪರ. ಇದನ್ನು ನೋಡಿ ಅದರಿಂದ ಪ್ರಯೋಜನ ಪಡೆಯುತ್ತಿದ್ದವರು ಉಪ್ಪಿನಕಾಯಿಗಾಗಿ ಇದ್ದ ಮರವೂ ಕೂಡ ಹೋಯಿತಲ್ಲಾ ಎಂದು ವ್ಯಸನಪಟ್ಟರು. ಪರ್ಮಿಟ್, ಬಸ್ ಲೈನು ಮುಂತಾದುವುಗಳನ್ನು ಪಡೆಯಲು ಕಾತುರರಾಗಿದ್ದವರು ತೋರಣ ಕಟ್ಟುವುದು, ಪೆಂಡಾಲ್ ಹಾಕುವುದು ಮುಂತಾದ ಕೆಲಸಗಳನ್ನು ಮಾಡಿ ತಮ್ಮ ಕೆಲಸಮಾಡಿಕೊಳ್ಳಲು ಹೀಗೆಲ್ಲಾ ಮಾಡುತ್ತಾರೆ. ನಿನ್ನೆ ಸೋಲೂರಿನಲ್ಲಿ ಒಂದು ಸಭೆ ನಡೆಯಿತು, ಅಲ್ಲಿಗೆ ಎಗ್ಜಿಕ್ಯೂಟಿವ್ ಎಂಜಿನಿಯರು, ಸೂಪರಿಂಟೆಂಡಿಂಗ್ ಎಂಜಿನಿಯರು, ಪಬ್ಲಿಕ್ ವರ್ಕ್ ಇಲಾಖೆ ಮಂತ್ರಿಗಳು, ಆರೋಗ್ಯ ಮಂತ್ರಿಗಳು ಮುಂತಾದವರೆಲ್ಲಾ ಹೋಗಿದ್ದರು. ಬರುವ ಮಹಾಚುನಾವಣೆಯಲ್ಲಿ ಸೋಲೂರು ಸಿದ್ದಪ್ಪನವರಿಗಾಗಿ ಗೆಲ್ಲುವ ಸಿದ್ದಪ್ಪನವರಲ್ಲ, ಸೋಲುವ ಸಿದ್ದಪ್ಪನವರಿಗಾಗಿ ಅಲ್ಲಿ ಎಲ್ಲಾ ವ್ಯವಸ್ಥೆಯಾಗಿತ್ತೆಂದು ಕಾಣುತ್ತದೆ. ಇದಕ್ಕೆಲ್ಲಾ ಹಣ ಖರ್ಚು ಮಾಡುವುದು ನ್ಯಾಯವೇ ?

ಈಗ ಒಂದೊಂದು ಜಿಲ್ಲೆಗೆ ಒಂದೊಂದು ಲಕ್ಷ ರೂಪಾಯಿ ಕೊಟ್ಟಿದ್ದಾರೆ, ಮಂತ್ರಿಗಳ ಕಾರು ಹೋಗುವುದಕ್ಕೆ ಒಂದೊಂದು ಸೇತುವೆ ಮಾಡಲಿ ಎಂಬ ಉದ್ದೇಶದಿಂದ ಇದನ್ನು ಕೊಟ್ಟಿದ್ದಾರೆ. ಹೀಗೆ ಹಂಗಾಮಿಯಾಗಿ ಹೆಚ್ಚಾಗಿ ಜನತೆಗೆ ಉಪಯೋಗ ಸಾಕಷ್ಟಾಗದ ಕಾರ್ಯಗಳಿಗೆ ಹಣ ವ್ಯಯ

ಮಾಡಿದರೆ ದೇಶದ ಪ್ರಗತಿಯಾಗುವುದು ಹೇಗೆಂಬುದನ್ನು ಯೋಚನೆಮಾಡಬೇಕು. ಯಾವ ಯಾವ ಊರಿಗೆ ಯಾವ ಅಧಿಕಾರಿಯನ್ನು ಪೋಸ್ಟ್ ಮಾಡಿದರೆ ಚುನಾವಣೆಯಲ್ಲಿ ತಮಗೆ ಬೇಕಾದವರು ಗೆಲ್ಲಲು ಸಾಧ್ಯವೆಂಬುದನ್ನು ಯೋಚಿಸಿ ಅದರಂತೆ ಹಾಕುತ್ತಿದ್ದಾರೆ. 15—20 ವರ್ಷಗಳಿಂದ ನಡೆಯುತ್ತಿರುವ ಮಹಾ ಚುನಾವಣೆಯ ವೈಖರಿಯನ್ನು ನೋಡಿ ಜನರು ಬೇಸತ್ತಿದ್ದಾರೆ. ಜನರಿಗೆ ಹುಳುಕು ಜೋಳ ಕಡಲೆಕಾಳು ಮುಂತಾದ ಪದಾರ್ಥಗಳನ್ನು ಕೊಡುತ್ತಿದ್ದರೆ ಅವರು ಹೇಗೆತಾನೆ ಸಹಿಸಿಯಾರು ? ಜನರಿಗೆ ಗೊಬ್ಬರಬೇಕು. ಅದಕ್ಕಾಗಿ ಬಾಗೇಶ್ವರದ ಹತ್ತಿರ ಅದಕ್ಕೆ ಉಪಯೋಗಿಸುವ ಮಣ್ಣಿದೆ. ಆದರೆ ಅದಕ್ಕೆ ಸಂಬಂಧಪಟ್ಟಂತೆ ಮಿಕ್ಸ್ ಮಾಡುವ ಏಜೆನ್ಸಿಯನ್ನು ಹಾಸನದ ಹತ್ತಿರವಿರುವ ಎಕ್ಸ್—ಜನರಲ್ ಸೆಕ್ರೆಟರಿ ಕೊಟ್ಟಿದ್ದಾರೆ. ಮಣ್ಣು ದೊರೆಯುವ ಜಾಗಕ್ಕೂ ಏಜೆನ್ಸಿ ಕೊಟ್ಟಿರುವ ಸ್ಥಳಕ್ಕೂ ಎಷ್ಟು ದೂರವಿದೆ ಎಂಬುದನ್ನು ಗಮನಿಸಬೇಕು. ಆ ಮಣ್ಣು ಹಿಂಬಾಗಿಲಿನಿಂದ ಬರುತ್ತದೆಂದು ಆ ಏಜೆನ್ಸಿ ಪಡೆದವರು ಮೊನ್ನೆ ವಿಧಾನಪರಿಷತ್ತಿನ ಸದಸ್ಯರಾದರು.

ಇನ್ನು ಬೀಜ ಒದಗಿಸುವ ವಿಷಯ ನೋಡೋಣ. ಮೊನ್ನೆ ಕನ್ನಡ ರಾಜ್ಯೋತ್ಸವದ ದಿನ ಸಂಸ್ಕೃತಿ ಪ್ರಚಾರ ಮುಂತಾದ್ದನ್ನು ಮಾಡಿ ಓಬವ್ವ ಮುಂತಾದವರನ್ನೆಲ್ಲಾ ಸ್ಮರಿಸಿದರು. ಇಂದು ಒಳ್ಳೆಯ ಮಾದರಿ ಬತ್ತದ ಬತ್ತನೆ ಬೀಜವನ್ನು, ಚೈನಾ ಕಡೆಯ ಮಾದರಿ ಬೀಜವನ್ನು ಒದಗಿಸುವುದಾಗಿ ಹೇಳುತ್ತಾರೆ. ಆದರೆ ಅದನ್ನು ಪಡೆಯಬೇಕೆಂದು ಎಲ್ಲಿ ವಿಚಾರಿಸಿದರೂ ದೊರೆಯಲಿಲ್ಲ, ತಾಲ್ಲೂಕುಬೋರ್ಡಿನವರು ತರಿಸಿಕೊಡಲು ಹಣವಿಲ್ಲ ಎನ್ನುತ್ತಾರೆ. ಹಣ ಕೊಟ್ಟರೆ ಬಿತ್ತನೆ ಮಾಡುವಾಗ ಬೀಜವಿಲ್ಲವೆಂದರೆ ಏನು ಮಾಡುವುದು ? ಬೀಜ, ಗೊಬ್ಬರ ಒದಗಿಸುವ ವಿಧಾನ ಈ ರೀತಿ ಇದೆ. ಹೋದ ವರ್ಷ ತಿಪಟೂರು, ಹಾಸನ, ಚನ್ನರಾಯಪಟ್ಟಣ ಮುಂತಾದ ಕಡೆಗಳಲ್ಲಿ ವ್ಯವಸಾಯವೇ ಇಲ್ಲದಿರುವಾಗ ಅಲ್ಲಿ ಗೊಬ್ಬರ ಮಾರಾಟ ಮಾಡಲ್ಪಟ್ಟಿತು. ಅದು ಎಲ್ಲಿಗೆ ಹೋಯಿತು ? ಮಂತ್ರಿಗಳು ಆ ಕಡೆ ಹೋಗಿ ತಾಲ್ಲೂಕು ಬೋರ್ಡ್ ಸದಸ್ಯರನ್ನು ಉದ್ದೇಶಿಸಿ ಖಾನಾಪುರದಲ್ಲಿ ನಿಮ್ಮ ಗೊಬ್ಬರ ಮಾರಾಟವಾಗುತ್ತಿದೆ, ನೀವೇನು ಮಾಡುತ್ತಿದ್ದೀರಿ ಎಂದು ಕೇಳಿದರು. ಮಂತ್ರಿಗಳೇಕೆ ತಪ್ಪಿತಸ್ಥರ ಮೇಲೆಕ್ರಮ ತೆಗೆದುಕೊಳ್ಳಲಿಲ್ಲ ? ಅವರಿಗೆ ಆ ಶಕ್ತಿ ಇಲ್ಲವೇ ? ಅವರೇನು ಸಂಬಳ ತೆಗೆದುಕೊಳ್ಳುವುದಕ್ಕೆ ಇದ್ದಾರೆಯೇ ?

ಮೊನ್ನೆ ಅತಿ ಉಗ್ರವಾದ ಒಂದು ಆರ್ಡಿನೆನ್ಸ್‌ನ್ನು ರಾಜ್ಯಪಾಲರಿಂದ ಹೊರಡಿಸಿದಿರಿ. ಇರುವ ಕಾನೂನುಗಳನ್ನೇ ಕೇಳುವವರು ದಿಕ್ಕಿಲ್ಲ. ಇದು ಹೇಗಿದೆ ಎಂದರೆ ಯಾರೋ ಕೈಲಾಗದೆ ಮೈ ಪರಚಿಕೊಂಡ ಎಂದು ಹೇಳುವಂತಿದೆ. ಇರುವ ಕಾನೂನುಗಳನ್ನೇ ಜಾರಿಗೆ ತರಲು ಶಕ್ತಿ ಇಲ್ಲದಿರುವಾಗ ಸಾವಿರಾರು ಕಾನೂನುಗಳನ್ನು ಪಾಸ್ ಮಾಡಿಸಿಕೊಳ್ಳುವುದರಿಂದ ಪ್ರಯೋಜನವಾಗುವುದಿಲ್ಲ. ವಿದ್ಯೆ ನೈವೇದ್ಯವಾಯಿತು, ಆರೋಗ್ಯ ಲಂಚದ ಮೂಲವಾಯಿತು. ಆರೋಗ್ಯ ಸಚಿವರು ಈಗ ಬಂದರು, ಅವರ ಆರೋಗ್ಯವೂ ಕೂಡ ಈಚೆಗೆ ಕೆಡುತ್ತಾ ಬಂದಿದೆ. (ನಗು)

ಕ್ಷಾಮ ಪರಿಹಾರ ನಿಧಿಗಾಗಿ ಹಣ ಖರ್ಚುಮಾಡಲು ಕೊಟ್ಟರೆ ಅದನ್ನು ಸಕಾಲದಲ್ಲಿ ಖರ್ಚು ಮಾಡುವುದಕ್ಕೆ ಸಾಧ್ಯವಾಗಿಲ್ಲ, ಕೂಲಿಗಳಿಗೆ 2 ದಿವಸಗಳಾದರೂ ಕೂಲಿ ಪಾವತಿ ಮಾಡುತ್ತಿಲ್ಲ, 3 ತಿಂಗಳಾದರೂ 4 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದಕ್ಕಾಗಲಿಲ್ಲ, ಕೂಲಿಗಳಿಗೆ ಸಕಾಲದಲ್ಲಿ ಕೂಲಿ ಕೊಡಲು ಸಾಧ್ಯವಾಗಲಿಲ್ಲ. ಚುನಾವಣೆಗಾಗಿ ಎಲ್ಲರೂ ತಿರುಗಿದ್ದೂ ತಿರುಗಿದ್ದೇ· ಏಕೆ ಮಂತ್ರಿಗಳು ಹೆಚ್ಚಿಗೆ ತಿರುಗಬೇಕು ? ಇರುವ ಕಡೆಯೇ ಅಧಿಕಾರ ಚಲಾಯಿಸಲಿ. ಅವರು ಮಹಾಚುನಾವಣೆಗೆ ಮುಂಚೆ ರಾಜಿನಾಮೆ ಕೊಟ್ಟು ನ್ಯಾಯಬದ್ಧವಾಗಿ ಚುನಾವಣೆ ನಡೆಯಲು ಅವಕಾಶ ಮಾಡಿಕೊಡಲಿ ಎಂದು ಇಷ್ಟನ್ನು ಹೇಳಿ ಅನಿವಾರ್ಯವಾಗಿ ನನ್ನ ಮಾತನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸಿಪುರ).—ಸಭಾಪತಿಗಳೇ, ಈಗ ನಮ್ಮ ಮುಂದಿರುವ 3 ಕೋಟಿ 87 ಲಕ್ಷ ರೂಪಾಯಿಗಳ ಹೆಚ್ಚುವರಿ ಬೇಡಿಕೆ ಬಗ್ಗೆ ನಾನು ಪೂರ್ಣವಾಗಿ ವಿರೋಧವನ್ನು ವ್ಯಕ್ತಮಾಡುತ್ತೇನೆ. ಈಗ ನಮ್ಮ ಮುಂದಿರುವ ಯಾವುದೇ ಡಿಮ್ಯಾಂಡ್ ನೋಡಿದರೂ ಕೂಡ ಪ್ರೊಡಕ್ಟೀವ್ ಕೆಲಸಗಳಿಗೆ ಯಾವುದೇ ರೀತಿಯಲ್ಲೂ ಹಣ ಕೇಳಿಲ್ಲ, ಕೆಲವು ಹೊಸ ಅಧಿಕಾರಿಗಳನ್ನು ಸೃಷ್ಟಿ ಮಾಡುವುದಕ್ಕೆ ಕೋರ್ಟ್ ಅವಾರ್ಡಿನಂತೆ ಕೆಲವು ಅಕ್ವಿಜಿಷನ್ ಸಂಬಂಧದಲ್ಲಿ ಹಣ ಪಾವತಿ ಮಾಡುವುದಕ್ಕೆ, ಹಾಗೂ ಕೆಲವು ಶರಾವತಿ ಮೆಂಟೆನೆನ್ಸ್ ಕೆಲಸಗಳಿಗೆ, ಹೀಗೆ ಅನೇಕ ಅನ್‌ಪ್ರೊಡಕ್ಟಿವ್ ಕೆಲಸಗಳಿಗೆ ಹೆಚ್ಚುವರಿ ಬೇಡಿಕೆ ಇದೆ ಎಂದು ಹೇಳಿದರೆ ತಪ್ಪಾಗಲಾರದು.

ಮಾನ್ಯ ಸಭಾಪತಿಗಳೇ ಈ ದಿವಸ ನನಗೆ ಮಾತನಾಡಲು ಹೆಚ್ಚು ಅವಕಾಶ ಕೊಡಬೇಕು. ಏಕೆಂದರೆ, ಹಾರಂಗಿ, ಹೇಮಾವತಿ ಬಗ್ಗೆ ಕೇಂದ್ರ ಸರಕಾರದಿಂದ ಉಂಟಾಗಿರುವ ತೊಡಕನ್ನು ಈ ಸಭೆಯಲ್ಲಿ ಪ್ರಸ್ತಾಪಮಾಡಿ ಸರಕಾರದ ಉತ್ತರ ಪಡೆಯಬೇಕಾದ್ದು ಯೋಗ್ಯವೆಂದು ನಾನು ಭಾವಿಸಿದ್ದೇನೆ. ಆದರೆ ಸಂಬಂಧಪಟ್ಟ ಮಂತ್ರಿಗಳು ಇಲ್ಲಿಲ್ಲ, ಇದಕ್ಕೆ ಸರಕಾರದ ಪರವಾಗಿ ಯಾರು ಉತ್ತರ ಕೊಡುತ್ತಾರೆಂಬುದು ಸಂಶಯಾಸ್ಪದವಾಗಿದೆ. ಏನೇ ಆಗಲಿ ಜಂಟಿ ಜವಾಬ್ದಾರಿ ಇರುವುದ ನಾನು ಪ್ರಸ್ತಾಪಿಸುವ ವಿಷಯದ ಬಗ್ಗೆ ಸರಕಾರದ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ.

(ಶ್ರೀ ಹೆಚ್. ಡಿ. ದೇವೇಗೌಡ)

ಸ್ವಾಮಿ, ಈ ದಿವಸ ಇಲ್ಲಿನ ಮೇಜರ್ ಇರಿಗೇಷನ್ ಬಗ್ಗೆ ಸರಕಾರ ತಳೆದಿರುವ ನೀತಿಯೇನಿದೆ ಅದು ಬಹಳ ಖಂಡನೀಯವಾದುದು ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ, ಮೊನ್ನೆ ಪತ್ರಿಕೆಯಲ್ಲಿ ಕಾಳೀನದಿ ಯೋಜನೆ ಬಗ್ಗೆ ಡ್ರಾಫ್ಟ್ ವರದಿಯಲ್ಲಿ 350 ಕೋಟಿ ರೂಪಾಯಿಗಳನ್ನು ತೋರಿಸಿ ಕೇಂದ್ರ ಸರಕಾರದ ಸಂಬಂಧಪಟ್ಟ ಮಂತ್ರಿಗಳಿಗೆ ಅದನ್ನು ಕೊಟ್ಟಿದ್ದಾರೆ ಎಂದು ವರದಿಯಾಗಿದೆ. ಈ ಪ್ರಶ್ನೆ ಹಾಕುವುದು ಏಕೆಂದರೆ, ಇಂದು ಶರಾವತಿ ಪವರನ್ನೆ ಬೇರೆ ದೇಶಗಳಿಗೆ ಕೊಡುತ್ತಿರುವಾಗ ಕಾಳಿನದಿ ಪ್ರಾಜೆಕ್ಟನ್ನು ಮೊದಲು ಪ್ರಾರಂಬಿಸಲು ಅಂಥ ಮುಖ್ಯವಾಗಿಸುವ ಸನ್ನಿವೇಶವಾದರೂ ಏನು ? ಅದನ್ನು ತಿಳಿಸಬೇಕು. ಇಂದು ಹಣವಿಲ್ಲ, ನಮ್ಮ ಶಕ್ತಿ ಕುಂದಿದೆ. ಹಾಗಿರುವಾಗ 350 ಕೋಟಿ ರೂಪಾಯಿಗಳ ಯೋಜನೆಯನ್ನು ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ತೆಗೆದುಕೊಂಡು 15 ವರ್ಷಗಳಲ್ಲಿ ಪೂರ್ಣಮಾಡುತ್ತೇವೆಂದು ಹೇಳುವುದರಲ್ಲಿ ಸರಕಾರದ ಧೋರಣೆಯಾದರೂ ಏನು ? ಅದನ್ನು ಸಾಧಿಸಬಹುದೇ ಎಂಬುದನ್ನು ಯೋಚನೆ ಮಾಡಬೇಕು. ಈ ದಿವಸ ನಮ್ಮಲ್ಲಿರುವ ಸ್ಪಿಲ್‌ಓವರ್ ಕೆಲಸವೇನಿದೆ ಮೇಜರ್ ಇರಿಗೇಷನ್ನಿಗೆ ಸಂಬಂಧಪಟ್ಟ ಕೆಲಸವೇನಿದೆ ಅದನ್ನು ಪೂರ್ಣಮಾಡುವುದಕ್ಕೆ ಯೋಗ್ಯತೆಯಿಲ್ಲ. ಇದನ್ನು ಸರಕಾರ ಸರಿಯಾಗಿ ಅವಲೋಕಿಸದಿದ್ದರೆ ಅದು ವಿಷಾದದ ವಿಷಯ. ಮೂರನೆಯ ಯೋಜನೆಯ ಸ್ಪಿಲ್‌ಓವರ್ ಕೆಲಸಗಳನ್ನು ನಾಲ್ಕನೆಯ ಪಂಚವಾರ್ಷಿಕಯೋಜನೆಗೆ ಮುಂದುವರೆಸಿ ಅಂಥ ಯೋಜನೆಗಳಿಗೆ ಹಣ ಕೊಡಲು ಶಕ್ತಿ ಇಲ್ಲದಿರುವಾಗ ಹೊಸದಾಗಿ ಅವಶ್ಯಕತೆ ಇಲ್ಲದಿರುವ ಕಾಳೀನದಿ ಯೋಜನೆಯನ್ನು 350 ಕೋಟಿ ರೂಪಾಯಿಗಳ ಯೋಜನೆಯನ್ನು ನಾಲ್ಕನೆಯ ಯೋಜನೆಯಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳುವುದು ಬಹಳ ಅಭ್ಯಾಸವೆಂದು ನನಗನ್ನಿಸುತ್ತದೆ.

ಏಕೆಂದರೆ, ಇವತ್ತು ಕೇಂದ್ರ ವತ್ತಾಯ ಮಾಡುತ್ತಾ ಇದೆ. ಮೊನ್ನೆ ಪ್ಲಾನಿಂಗ್ ಕಮಿಷನ್ನಿನ ಸದಸ್ಯರಾದ ಪ್ರೊಫೆಸರ್ ಥ್ಯಾಕರ್ ಅವರು ಕಾಳಿ ನದಿ ಪ್ರಾಜೆಕ್ಟ್ ಆಗಲೇಬೇಕು ಬಹಳ ಅವಶ್ಯಕ ಎಂದು ಹೇಳಿದ್ದಾರೆ. ಪಕ್ಕದ ಸಂಸ್ಥಾನಗಳಿಗೆ ನಮ್ಮಿಂದ ಪವರ್ ಬೇಕು, ಅದಕ್ಕೆ ಹೆಚ್ಚಿನ ಉತ್ತೇಜನ ತೋರಿಸಬಹುದು ಆದರೆ ಅದಕ್ಕೆ ಹಣ ಎಲ್ಲಿಂದ ಬರುತ್ತದೆ ಎಂಬುದರ ಬಗ್ಗೆ ತಾವು ಪ್ರಶ್ನೆ ಮಾಡಬೇಕಾಗುತ್ತದೆ. ಇವತ್ತು ಹೇಮಾವತಿ ಮತ್ತು ಹಾರಂಗಿ ಬಗ್ಗೆ ಪತ್ರಿಕೆಯಲ್ಲಿ ನಾನು ಆಗಲೇ ಒಂದು ಹೇಳಿಕೆ ಕೊಟ್ಟಿದ್ದೇನೆ ಮತ್ತು ಕಳೆದ ಮೂರು ನಾಲ್ಕು ದಿವಸಗಳಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಸರ್ಕಾರದ ಗಮನವನ್ನೂ ಕೂಡ ಸೆಳೆಯುತ್ತಾ ಇದ್ದೇವೆ. ಇವತ್ತು ನಿಜವಾಗಿಯೂ ಹೇಳುವುದಾದರೆ, 5 ವರ್ಷದಿಂದ ಪದೇ ಪದೇ ಒಂದು ರೀತಿಯಲ್ಲಿ ಖಾಸಗಿ ನಿರ್ಣಯ ಹಾಗೂ ಸ್ಪೆಷಲ್ ರೆಸಲ್ಯೂಷನ್ ತಂದು ಅದರ ಬಗ್ಗೆ ಈ ಸಭೆಯಲ್ಲಿ ಅಂಗೀಕಾರವಾಗಿದೆ. ಇವತ್ತು ಸರ್ಕಾರದವರನ್ನು ಪ್ರಶ್ನೆ ಮಾಡಬೇಕಾಗಿದೆ, ಅದರ ವಿಷಯದಲ್ಲಿ ಏನನ್ನು ಸರ್ಕಾರ ಸಾಧನೆ ಮಾಡಿದೆ ? ಪ್ರಾಜೆಕ್ಟ್ ರಿಪೋರ್ಟ್‌ನ್ನು ಸಿ.ಡಬ್ಲ್ಯು.ಪಿ.ಸಿ. ಅವರು ಮದ್ರಾಸ್ ಸರ್ಕಾರದವರಿಗೆ ಕಳುಹಿಸಿದ್ದಾರೆ. ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಇವತ್ತು ಸಿ.ಡಬ್ಲ್ಯು.ಪಿ.ಸಿ. ತನ್ನ ಒಂದು ಕೆಲಸದಲ್ಲಿ ಎಷ್ಟು ತಾರತಮ್ಯವನ್ನು ತೋರಿಸುತ್ತಾ ಇದೆ ಎನ್ನುವುದು ಇದರಿಂದ ಎದ್ದು ಕಾಣುತ್ತಾ ಇದೆ. ಹೇಮಾವತಿ ಪ್ರಾಜೆಕ್ಟ್ ಇಂದ 45 ಟಿ.ಎಂ.ಸಿ.ಎಫ್.ಟಿ. ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದೆ. ಅಂತಹ ಸಂದರ್ಭದಲ್ಲಿ ಮದ್ರಾಸ್ ಸರ್ಕಾರದವರನ್ನು ಅವರ ಅಭಿಪ್ರಾಯವನ್ನು ಸೂಚಿಸಿ ಎಂದು ಕೇಳತಕ್ಕ ಅವಶ್ಯಕತೆ ಏನಿತ್ತು? ಈಗ ಅವರು ತಮ್ಮ ಒಂದು ಅಭಿಪ್ರಾಯವನ್ನು ಸೂಚಿಸಬೇಕಾಗಿದೆ. 1924 ರಿಂದ ಈಚೆಗೆ ಆದ ಅಗ್ರಿಮೆಂಟ್ ಪ್ರಕಾರ ಮದ್ರಾಸ್ ಸರ್ಕಾರದವರು ಅನೇಕ ಪ್ರಾಜೆಕ್ಟ್‌ಗಳನ್ನು ಕಟ್ಟಿದ್ದಾರೆ, ಅವರು ಕಟ್ಟಿರತಕ್ಕ ಯಾವುದೇ ಆದರೂ ಪ್ರಾಜೆಕ್ಟ್‌ಗೆ ಮೈಸೂರು ಸರ್ಕಾರದವರ ಅನುಮತಿಯನ್ನು ಕೇಳಿದ್ದಾರೆಯೇ ? ಹಾಗಾದರೆ ಅವುಗಳನ್ನೂ ಕೂಡ ಏಕೆ ರೆಫರ್ ಮಾಡಲಿಲ್ಲ ! ಮದರಾಸ್ ಸರಕಾರದವರು ಈಚೆಗೆ ಕಟ್ಟಿರತಕ್ಕ ಪ್ರಾಜೆಕ್ಟ್‌ಗಳ ವಿಷಯದಲ್ಲಿ ಸಿ.ಡಬ್ಲ್ಯು.ಪಿ.ಸಿ. ಅವರು ಮೈಸೂರು ಸರ್ಕಾರದವರ ಅಭಿಪ್ರಾಯವನ್ನು ಏಕೆ ಕೇಳಲಿಲ್ಲ! ಮೈಸೂರು ಸರ್ಕಾರದ ಈ ಎರಡು ಪ್ರಾಜೆಕ್ಟ್‌ಗಳಿಗೆ ಮಾತ್ರ ಅವರು ಮದ್ರಾಸ್ ಸರ್ಕಾರದ ನಿಲುವನ್ನು ಕೇಳಬೇಕಾದರೆ ಮೈಸೂರು ಸರ್ಕಾರದ ಬಗ್ಗೆ ಸಿ.ಡಬ್ಲ್ಯು.ಪಿ.ಸಿ. ಅವರು ತೋರಿಸಿರತಕ್ಕ ತಾರತಮ್ಯ ಎಷ್ಟರಮಟ್ಟಿಗೆ ಇದೆ ಎಂಬುದು ಅರ್ಥವಾಗುತ್ತದೆ. ಇದನ್ನು ಪ್ರತಿಭಟಿಸತಕ್ಕ ಶಕ್ತಿ ರಾಜ್ಯ ಸರ್ಕಾರಕ್ಕೆ ಇದೆಯೇ ಎಂದರೆ ಇಲ್ಲ. ಇವತ್ತಿನ ದಿವಸ ಮಂತ್ರಿಗಳು ಡೆಲ್ಲಿಗೆ ಹೋಗುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳ ಅಭಿಪ್ರಾಯ ಯಾವರೀತಿ ಬರುತ್ತದೆ ಎಂಬುದನ್ನು ನಾವು ನೋಡಿದ್ದೇವೆ. ಡೆಲ್ಲಿಯಲ್ಲಿ ಒಂದು ಹೇಳಿಕೆ ಕೊಡುತ್ತಾರೆ ಕೃಷ್ಣಾ ಪ್ರಾಜೆಕ್ಟ್ ಆಗುತ್ತದೆ, ಕಾವೇರಿ ಪ್ರಾಜೆಕ್ಟ್ ಆಗುತ್ತದೆ, ಕ್ಲಿಯರೆನ್ಸ್ ಕೇಳಿದ್ದೇವೆ, ಇವತ್ತು ಬರುತ್ತದೆ ಎಂದೆಲ್ಲಾ ಹೇಳುತ್ತಾರೆ. ಮೈಸೂರಿನ ಜನತೆಯನ್ನು ಇಷ್ಟೊಂದು ಮೋಸಗೊಳಿಸಬಾರದು. ಇವತ್ತು ನಮ್ಮ ಶಕ್ತಿನೋಡುವುದಾದರೆ

ನಿಜವಾಗಿಯೂ ಕೇಂದ್ರದಿಂದ ದೊರಕಬೇಕಾದ ನ್ಯಾಯವಾದ ಹಕ್ಕು ಏನಿದೆಯೋ ಅದನ್ನು ದೊರಕಿಸಿಕೊಳ್ಳುವುದಕ್ಕೆ ಯೋಗ್ಯತೆ ಇಲ್ಲ ಎಂದರೆ ನಾಚಿಕೆಪಡಬೇಕಾದ ವಿಷಯ. ಏಕೆಂದರೆ ಇವತ್ತು ಟೆಕ್ನಿಕಲ್ ಸಬ್‌ಕಮಿಟಿ ಇದೆ. ಮದರಾಸ್ ಸರ್ಕಾರದವರು ಎತ್ತಿರತಕ್ಕ Natural law of river waters ಎಂಬ ಸೋಗನ್ನು ಎತ್ತಿ ಅದರ ಪರಿಮಿತಿಯಲ್ಲಿ ಲಾ ಡಿಪಾರ್ಟ್‌ಮೆಂಟಿಗೆ ರೆಫರ್ ಮಾಡಿದ್ದಾರೆ ಎಂದು ಸರಿಯಾದ ಕಡೆಯಿಂದ ನನಗೆ ವರ್ತಮಾನ ಬಂದಿದೆ. ಕೇಂದ್ರದ ಲಾ ಡಿಪಾರ್ಟ್‌ಮೆಂಟಿನವರನ್ನು ಅವರು ಒತ್ತಾಯಪಡಿಸುತ್ತಾ ಇದ್ದಾರೆ, ಲಾ ಡಿಪಾರ್ಟ್‌ಮೆಂಟು ಅಭಿಪ್ರಾಯ ಕೊಡಬೇಕೆಂದು ಅನೇಕ ಖಾಸಗಿ ಮುಖಂಡರು ಉಚ್ಚಸ್ಥಾನದಲ್ಲಿರತಕ್ಕವರು ಇವತ್ತು ಕೇಂದ್ರ ಸರ್ಕಾರದ ಲಾ ಡಿಪಾರ್ಟ್‌ಮೆಂಟಿಗೆ ಬರೆದಿದ್ದಾರೆ ಎಂದು ಕೇಳಿದ್ದೇವೆ. ಇಂತಹ ಸಂದರ್ಭದಲ್ಲಿ ಅವರು ನಮಗೆ ಪ್ರತಿಕೂಲವಾದಂತಹ ಅಭಿಪ್ರಾಯವನ್ನು ಕೊಡುವುದಾದರೆ.. ......

Mr. SPEAKER.—The member must not drag in those that are not able to answer here. He is again and again criticising the Central Government, the C.W.P.C., the Law Department of the Central Government, and so on.

Sri H. D. DEVE GOWDA.—This Government is responsible for all this.

Mr. SPEAKER.—Then he may charge this Government.

Sri H. D. DEVE GOWDA.—I charge this Government.

Mr. SPEAKER.—The member may criticise this Government as much as he likes, but let him not criticise others.

ಶ್ರೀ ಹೆಚ್. ಡಿ. ದೇವೇಗೌಡ.—ಇವತ್ತು ಏನಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತಂದಿದ್ದೇನೆ ಇದರ ಉದ್ದೇಶವಾದರೂ ಇಷ್ಟೆ. ಸರ್ಕಾರ ಈ ಒಂದು ವಿಷಯದ ಬಗ್ಗೆ ಎಚ್ಚರಿಕೆಯಿಂದ ವರ್ತಿಸಲಿ ಎಂಬ ಒಂದೇ ಒಂದು ಅಭಿಪ್ರಾಯದಿಂದ ಈ ವಿಷಯವನ್ನು ಪ್ರಸ್ತಾಪಮಾಡಿದೆ. ಇವತ್ತಿನವರೆಗೂ ಮದ್ರಾಸ್ ಸರ್ಕಾರ ಎತ್ತಿರತಕ್ಕ ಲೋಪದೋಷಗಳ ಬಗ್ಗೆ ಮೈಸೂರು ಸರ್ಕಾರ ಯಾವ ಒಬ್ಬ ಅಧಿಕಾರಿಯನ್ನೇ ಆಗಲಿ ಕಳುಹಿಸಿ ತನ್ನ ಪ್ರತಿಭಟನೆಯನ್ನು ಸೂಚಿಸತಕ್ಕ ಗೋಜಿಗೆ ಹೋಗಿದೆಯೋ ಎಂದು ಪ್ರಶ್ನೆ ಮಾಡುತ್ತೇನೆ, ಇವತ್ತು ಮಾನ್ಯ ಸಚಿವರು ಈ ಸಭೆಗೆ ಉತ್ತರವನ್ನು ಕೊಡುವಾಗ ಇದನ್ನು ಹೇಳಬೇಕು. ಎಷ್ಟೇ ತೊಂದರೆ ಇರಲಿ, ಅಡ್ಡಿ ಆತಂಕ ಇರಲಿ, ಈ ಯೋಜನೆಗಳನ್ನು ನಿಲ್ಲಿಸುವುದಿಲ್ಲ ಎಂದು ಈ ಸಭೆಯಲ್ಲಿ ಈಗಾಗಲೇ ವಾಗ್ದಾನ ಕೊಟ್ಟಿದ್ದೀರಿ. ತಮ್ಮ ವಾಗ್ದಾನ ಬರೀ ವಾಗ್ದಾನವಾಗಿ ಉಳಿಯುತ್ತದೆಯೋ ಹೊರತು ಕಾರ್ಯರೂಪಕ್ಕೆ ಬರುವುದರಲ್ಲಿ ನಮಗೆ ಸಂದೇಹ ಸಂಶಯ ವುಂಟಾಗಿದೆ. ಇದಕ್ಕೆ ಕಾರಣವೇನೆಂದರೆ, ಕೇಂದ್ರದಿಂದ ಕ್ಲಿಯರೆನ್ಸ್ ಸಿಕ್ಕಿದ್ದರೆ ಇದಕ್ಕೆ ಹಣ ಎಲ್ಲಿಂದ ಬರುತ್ತದೆ? ಇದು ಒಂದು ಬೃಹತ್ ಪ್ರಶ್ನೆಯಾಗಿದೆ. ಹಣದ ಕೊರತೆ ಒಂದು. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಎರಡು ಯೋಜನೆಗಳನ್ನೂ ಡ್ರಾಫ್ಟ್‌ನಲ್ಲಿ ಸೇರಿಸಿಲ್ಲ ಎಂದು ಪ್ಲಾನಿಂಗ್ ಕಮಿಷನ್‌ನವರು ಹೊಡೆದು ಹಾಕಿದ್ದಾರೆ ಎಂದು ಗೊತ್ತಾಗಿದೆ. ಒಂದು ಮಾತನ್ನು ಹೇಳಬೇಕಾಗುತ್ತದೆ, ಕೇವಲ ಜನರನ್ನು ವಂಚಿಸತಕ್ಕ ಹೇಳಿಕೆಯನ್ನು ಈ ಸಭೆಯಲ್ಲಿ ಕೊಡುವುದರಿಂದ ಜನತೆಯ ಮುಖಂಡರು ತೃಪ್ತರಾಗಲಾರರು ಎಂದು ತಿಳಿಸುತ್ತೇನೆ. ಈ ಪ್ರಾಜೆಕ್ಟ್‌ಗಳಿಂದ ಸಹಾಯವಾಗಬೇಕೆಂದು ಅನ್ನತಕ್ಕ ಜನರ ಸ್ಥಿತಿಗತಿಗಳು ಏನಿದೆ ಎಂಬುದನ್ನು ತಾವು ನೋಡಬೇಕು, ಅವರ ಸ್ಥಿತಿಯನ್ನು ನೋಡಿದರೆ ನಿಜವಾಗಿಯೂ ಕಣ್ಣಿನಲ್ಲಿ ರಕ್ತ ಬರತಕ್ಕ ಸನ್ನಿವೇಶ ಇದೆ. ಸಂಬಂಧಪಟ್ಟ ಮಂತ್ರಿಗಳು ಹಳೇ ಮೈಸೂರಿನವರಾದ ಶ್ರೀಮಾನ್ ಅರಸ್‌ರವರು ಇದ್ದಾರೆ ಅವರಿಗೆ ಇದು ಗೊತ್ತಿದೆ, ಹಂಪಾಪುರದಲ್ಲಿ ನಡೆದ ಸಭೆಯಲ್ಲಿ ಅವರು ಅಧ್ಯಕ್ಷತೆ ವಹಿಸಿದ್ದರು, ಸ್ಟೇಟ್ ರಿಸೋರ್ಸ್‌ಸ್ ಇಂದ ಹಾರಂಗಿ ಯೋಜನೆಯನ್ನು ಕಾರ್ಯಗತ ಮಾಡುತ್ತೇವೆ ಎಂದು ಹೇಳಿದ್ದಾರೆ. ನಿಜವಾಗಿಯೂ ಅವರಿಗೆ ಆ ಶಕ್ತಿ ಇದೆಯೇ ಎಂದು ನಾನು ಈ ದಿವಸ ಪ್ರಶ್ನೆ ಮಾಡುತ್ತೇನೆ. ಕೇಂದ್ರದಿಂದ ಒದಗಬೇಕಾಗಿರತಕ್ಕ ಹಣದ ಭಾಗವನ್ನು ಸಲ್ಲಿಸಿಕೊಳ್ಳಲಿಕ್ಕೆ ರಾಜ್ಯ ಸರ್ಕಾರ ತನ್ನ ಪ್ರಭಾವವನ್ನು ಬೀರತಕ್ಕ ಶಕ್ತಿ ಅದಕ್ಕೆ ಇದೆಯೇ ಎಂದು ಕೇಳಬೇಕಾಗುತ್ತದೆ. ಕೇಂದ್ರದಲ್ಲಿ ಪ್ರಭಾವ ಬೀರತಕ್ಕ ಶಕ್ತಿ ನಿಮಗೆ ಇಲ್ಲ. ರಾಜ್ಯ ಸರ್ಕಾರಕ್ಕೆ ಅದರಿಂದಾಗಿ ಸರಿಯಾದ ಪ್ರಾತಿನಿಧ್ಯವಿಲ್ಲ. ನಿಜವಾಗಿಯೂ ಹೇಳುವುದಾದರೆ, ಸರಿಯಾದ ನಾಯಕತ್ವ ಇಲ್ಲವೇ ಬಹಳ ಸಂಕಟ ಪರಿಸ್ಥಿತಿಯುಂಟಾಗಿದೆ. ಈ ಸನ್ನಿವೇಶವನ್ನು ನಮ್ಮ ಸರ್ಕಾರದವರು ಶಕ್ತಿಮೀರಿ ಪ್ರಯತ್ನಪಟ್ಟು ಪಾರು ಮಾಡಬೇಕು ಎಂದು ಮತ್ತೊಮ್ಮೆ ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ನಮ್ಮ ಮುಂದೆ ಇರತಕ್ಕ ಡಿಮ್ಯಾಂಡ್ ಸುಮಾರು 3 ಕೋಟಿ ರೂಪಾಯಿ ಎಂದು ಕಾಣುತ್ತಾ ಇದ್ದರೂ ಕೂಡ ಇದರಲ್ಲಿ ಬೇಕಾದಷ್ಟು ಟೋಕನ್ ಗ್ರಾಂಟ್ಸ್ ಇರುವುದರಿಂದ ಇದರ ಒಂದು ಗಾತ್ರವೇ ನಮಗೆ ಸಿಕ್ಕುವ ಹಾಗೆ ಇಲ್ಲ. ಉದಾಹರಣೆಗೆ ಡಿಮ್ಯಾಂಡ್ ನಂಬರ್ 1-22-23-24ರಲ್ಲಿ ಅವೆಲ್ಲಾ ಬರೀ ಟೋಕನ್ ಗ್ರ್ಯಾಂಟ್ ಆಗಿರುವುದರಿಂದ ಇದರ ಗಾತ್ರ ಎಲ್ಲಿಗೆ ಬರುತ್ತದೆ ಎಂದು ಊಹಿಸಲಿಕ್ಕೆ ಅಸಾಧ್ಯವಾಗಿದೆ. ಡಿಮ್ಯಾಂಡ್ ನಂಬರ್ 1 ರಲ್ಲಿ ಅಗ್ರಿಕಲ್ಚರಲ್ ಇನ್‌ಕಂಟಾಕ್ಸ್ ಅಂತ ಇದೆ. ರೈತರನ್ನು ಅನೇಕ ವಿಧದಲ್ಲಿ ಶೋಷಣೆ ಮಾಡಿದರೂ ಕೂಡ ನಿಮ್ಮ ಮನಸ್ಸಿಗೆ ತೃಪ್ತಿಯಾಗುವುದಿಲ್ಲ. ಇದರಲ್ಲಿ ಬಹಳ ಅನ್ಯಾಯ ನಡೆಯುತ್ತಾ ಇದೆ. ಸಾಮಾನ್ಯ ರೈತ ಅಲ್ಲದೆ ಶ್ರೀಮಂತನಾದ ರೈತನೂ ಕೂಡ ಅವನು ತನ್ನ ಸಂಸಾರವನ್ನು ನಿರ್ವಹಿಸುವಾಗ ನಾನಾ ವಿಧವಾದ ಟ್ಯಾಕ್ಸ್‌ಗಳನ್ನು ಕೊಡಬೇಕಾಗಿರುವುದರಿಂದ ಯಾವುದನ್ನು ಕೊಡುವುದಕ್ಕೂ ಅವನಿಗೆ ಸಾಧ್ಯವಿಲ್ಲವಾಗಿದೆ. ಹೀಗಿರುವಾಗ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್‌ಗೇ ಪ್ರತಿ ಜಿಲ್ಲೆಯಲ್ಲಿ ಒಂದು ಎಸ್ಟ್ಯಾಬ್ಲಿಷ್‌ಮೆಂಟ್ ಇಟ್ಟು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದ್ದೀರಿ. ಇದರಿಂದ ರೈತನಿಗೆ ಎಷ್ಟು ವಿಧದಲ್ಲಿ ತೊಂದರೆ ಕೊಡುತ್ತಾ ಇದ್ದೀರಿ ಎಂಬುದು ಅರ್ಥವಾಗುತ್ತದೆ. ರೈತನ ವಿಷಯದಲ್ಲಿ ಇಂತಹ ಸವತಿಮತ್ಸರ ಏಕೆ ಎಂದು ಪ್ರಶ್ನೆ ಮಾಡುತ್ತೇನೆ. ಬಹಳ ವಿಷಾದದಿಂದ ಈ ಸಭೆಯ ಗಮನಕ್ಕೆ ತರಬೇಕಾಗಿರುವುದೇನೆಂದರೆ, ಒಂದು ನಿದರ್ಶನ ಕೊಡುತ್ತೇನೆ, ಈ ಟ್ಯಾಕ್ಸ್ ವಸೂಲು ಮಾಡುತ್ತಾ ಇರತಕ್ಕ ಕೆಲವು ಜಿಲ್ಲೆಗಳಲ್ಲಿ ಕೆಲವು ನೌಕರರು ಒಳಸಂಚು ಮಾಡಿ ಇಷ್ಟು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಕೊಡಬೇಕೆಂದು ನೋಟೀಸ್ ಕೊಟ್ಟು, ರೈತ ಹೆದರಿಕೊಂಡು ಲಾಯರ್ ಮೂಲಕವೋ ಅಥವಾ ತಾನೇ ಆಫೀಸಿಗೆ ಬಂದೋ ನೂರಾರು ರೂಪಾಯಿ ಲಂಚಕೊಟ್ಟು ಹೋಗಬೇಕಾಗಿದೆ. ಅತ ಏನೂ ಕೊಡಬೇಕಾಗಿಲ್ಲದೆ ಇದ್ದರೂ ಕೂಡ ಅತನಿಗೆ ನೋಟೀಸ್ ಕೊಟ್ಟು ಅತ ಆಫೀಸಿಗೆ ತಿರುಗಾಡಬೇಕಾದ ಸನ್ನಿವೇಶ ಬಂದಿದೆ. ಇದು ಸರ್ಕಾರದವರ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ವಿಜಿಲೆನ್ಸ್ ಕಮಿಷನರ ಗಮನಕ್ಕೂ ಕೂಡ ಬಂದಿಲ್ಲ ಎಂದು ಕಾಣುತ್ತದೆ. ಇನ್ನು ಮುಂದಾದರೂ ಸರ್ಕಾರದವರು ಪರಿಶೀಲನೆ ಮಾಡಿ ರೈತನಿಗೆ ಯಾವ ಮಟ್ಟದಲ್ಲಿ ಕಿರುಕುಳ ಕೊಡುತ್ತಾ ಇದ್ದಾರೆ ಎಂಬುದನ್ನು ಗಮನಿಸಿ ಅದನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಡಿಮ್ಯಾಂಡ್ ನಂ. 33 ರಲ್ಲಿ — ಕ್ಷಾಮನಿವಾರಣಾ ಕಾಂಗಾರಿಯ ಹೆಡ್ಡಿನಲ್ಲಿ ಇರಿಗೇಷನ್ ಕಾಂಗಾರಿಗಾಗಿ ಆಗಿಂದಾಗ್ಗೆ ಸಹಾಯ ನೀಡುತ್ತಿದ್ದಾರೆ — ಇಲ್ಲಿಯವರೆಗೆ ಸುಮಾರು 4 – 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ ಈ ಬಾಬಿನಲ್ಲಿ ಕೆಲಸ ವಿತರಣೆಯಿಂದಾಗಲೀ ಅಥವಾ ಸಮರ್ಪಕವಾಗಿಯಾಗಲೀ ಆಗಿಲ್ಲ. ಕೆಲವು ಕಡೆಗಳಲ್ಲಿ ಮಣ್ಣಿನ ರಸ್ತೆ ಕಾಂಗಾರಿಗಳನ್ನು ಮಾಡಬೇಕೆಂದು ತೀರ್ಮಾನವಾಗಿತ್ತು. ನಾವು ಕೆಲವು ರಸ್ತೆಗಳನ್ನು ಮಾಡಬೇಕೆಂದು ಒತ್ತಾಯ ಮಾಡಿದ್ದೆವು. ಅದಕ್ಕೆ ಹಣವನ್ನೂ ಕೂಡ ಮಿಾಸಲಾಗಿಡಲಾಗಿತ್ತು. ಎಲ್ಲಿಯೋ ಒಂದೆರಡು ರಸ್ತೆಗಳ ಕೆಲಸವನ್ನು ಕೈಗೊಂಡು ಬಾಕಿ ಕೆಲಸಗಳನ್ನು ಹಾಗೇ ನಿಲ್ಲಿಸಿದ್ದಾರೆ. ನಾವು ಸ್ಥಳದಲ್ಲಿ ಅಧಿಕಾರಿಗಳನ್ನು ಕೇಳಿದರೆ ಅವರು ಹಣವನ್ನು ಖರ್ಚುಮಾಡಬಾರದೆಂದು ತಮಗೆ ಮೇಲಿನಿಂದ ಆಜ್ಞೆ ಬಂದಿದೆ ಎಂದು ಅಲ್ಲಿ ಹೇಳುತ್ತಿದ್ದಾರೆ. ಹೀಗೆ ಕಾರ್ಯ ಎಲ್ಲಿಯೂ ಸಮರ್ಪಕವಾಗಿ ನಡೆದಿಲ್ಲ. ಇದನ್ನೆಲ್ಲಾ ನೋಡಿದರೆ ಇದೇನು ಒಂದು ನಾಟಕವೋ ಎಂಬಹಾಗೆ ಕಾಣುತ್ತದೆ. ಇನ್ನು ಇದರಲ್ಲಿ ಸರ್ಕಾರದವರು ಪ್ರತಿಯೊಂದು ಜಿಲ್ಲೆಯ break up figures ಕೊಡದೆ ತಮಗೆ ಬೇಕಾದ ಯಾವುದೋ ಪ್ರದೇಶಕ್ಕೆ ಅನುಕೂಲ ಮಾಡಲು ಇನ್ನು ಕೆಲವು ಭಾಗಕ್ಕೆ ವಂಚನೆಯನ್ನು ಮಾಡಲು ಹೀಗೆ ಮಾಡಿದ್ದಾರೆಂದು ಕಾಣುತ್ತದೆ.

ಇನ್ನು ಬೆಂಗಳೂರು ಮತ್ತು ಮೈಸೂರು ಸರ್ಕಲ್ಲುಗಳಲ್ಲೂ ಕ್ಷಾಮದ ತೊಂದರೆ ಇದೆ. ಆದರೂ ಸರ್ಕಾರದವರು ತಮ್ಮ ಮನಸ್ಸಿಗೆ ಬಂದಹಾಗೆ ಕೆಲಸಮಾಡುತ್ತಾ ಹಣವನ್ನು ವ್ಯಯಮಾಡುತ್ತಿದ್ದಾರೆ. ಹೀಗೆ ಸಾಯಿಲ್ ಕನ್‌ಸರ್ವೇಷನ್ನಿನಲ್ಲಿ 30 ಸಾವಿರ ರೂಪಾಯಿಗಳನ್ನು ತಮುಕೂರು, ಚಿತ್ರದುರ್ಗ ಈ ಎರಡು ಜಿಲ್ಲೆಗಳಿಗೆ ಮಾತ್ರ ಒದಗಿಸಿದ್ದಾರೆ. ಇನ್ನುಳಿದ ಜಿಲ್ಲೆಗಳಿಗೂ ಇದರ ಅವಶ್ಯತೆ ಇದ್ದರೂ ಹಣವನ್ನು ಒದಗಿಸಿಲ್ಲ. ಹೀಗೆ ಸರ್ಕಾರದವರು ಮಂದಗಾಮಿಯಾಗಿ ನಡೆಯುತ್ತಿದ್ದಾರೆ ಇವರೆಂದು ಇನ್ನುಳಿದ ಕಡೆಗಳಿಗೆಲ್ಲಾ ಈ ಕೆಲಸಮಾಡುತ್ತಾರೋ ತಿಳಿಯದು.

ಇನ್ನು ಇಲ್ಲಿ ಎಮರ್ಜೆನ್ಸಿ ಫೀಡಿಂಗ್ ಎಂಬ ಬಾಬಿಗೆ 10 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಆದರೆ ಈ ಮೊಬಲಗು ಯಾರಿಗೆ ಹೋಗಿ ಮುಟ್ಟಬೇಕೋ ಅವರಿಗೆ ಮುಟ್ಟುತ್ತಿಲ್ಲ. ಇದೆಲ್ಲಾ ಅಧಿಕಾರಿಗಳ ಟಿ.ಎ. ಮತ್ತು ಡಿ.ಎ.ಗಳಿಗೆ ಖರ್ಚಾಗುತ್ತಿದೆ. ಮೊನ್ನೆಯ ಬರಗಾಲದಲ್ಲಿ ಅನಾಥರೂ ಹೊಟ್ಟೆಗಿಲ್ಲದವರೂ ಅನೇಕರು ಅನ್ನವಿಲ್ಲದೆ ಸತ್ತರು. ಹೀಗೆ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಣತ್ಯಾಗ ಮಾಡಿಕೊಳ್ಳತಕ್ಕ ಜನರಿಗೆ ಇವರಿಂದ ಏನೂ ಸಹಾಯವಾಗುತ್ತಿಲ್ಲ. ಅರ್ಹರಾದವರಿಗೆ ಅನುಕೂಲ ಸಿಗುತ್ತಿಲ್ಲ.

ಡಿಮ್ಯಾಂಡ್ ನಂ. 44 ರಲ್ಲಿ ಈ ಸೊಸೈಟಿಗಳಿಗೆ ಬೇಕಾದಷ್ಟು ಹಣವನ್ನು ಕೊಟ್ಟಿದ್ದಾರೆ. ಇದೆಲ್ಲಾ ಬರೀ ಒಂದು ಚುನಾವಣೆಯ ಪ್ರಚಾರ. ಇವರ ಚುನಾವಣೆಗಾಗಿ ಇವರು ಸ್ವೇಚ್ಛೆಯಾಗಿ ಹೀಗೆಲ್ಲಾ ಹಣವನ್ನು ಖರ್ಚುಮಾಡತಕ್ಕದ್ದು ಸರಿಯಲ್ಲ. ಈ ಸೊಸೈಟಿಗಳಿಗೆಲ್ಲಾ ಷೇರ್ ರೂಪದಲ್ಲೂ ಇನ್ನೂ ಬೇರೆ ಬೇರೆ ರೂಪದಲ್ಲೂ ಹಣವನ್ನು ಅವರಿಗೆ ಒದಗಿಸಿ ಇವರು ಅವರಿಂದ ಓಟುಗಳನ್ನು ಪಡೆದು ಮತ್ತೆ ಇಲ್ಲ ಅಧಿಕಾರಕ್ಕೆ ಬಂದು ಕುಳಿತುಕೊಳ್ಳಲು ಹೀಗೆಲ್ಲಾ ಹಣವನ್ನು ಸ್ವೇಚ್ಛೆಯಾಗಿ ಖರ್ಚುಮಾಡುವುದಕ್ಕೆ ಹೊರಟಿದ್ದಾರೆ. ಇಂಥ ಒಂದು ಶಂಕೆ ನಮಗೆ ಬಂದಿದೆ. ಆ ಅನುಮಾನಪರಿಚ್ಛೇದವನ್ನು ಸರ್ಕಾರದವರೀಗ ಮಾಡಬೇಕಾಗಿದೆ. ಇಲ್ಲವಾದರೆ ನಮ್ಮ ಶಂಕೆ ನ್ಯಾಯವಾದದ್ದು ಎಂದಾಗುವುದು.

ಇನ್ನು ಡಿಮ್ಯಾಂಡ್ ನಂ. 54 ರಲ್ಲಿ ಕಲ್ಟಿವೇಟರುಗಳಿಗೆ ಅಡ್ವಾನ್ಸ್ ಎಂತ ಎರಡು ಐಟಂಗಳ ಬಗ್ಗೆ 75 ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಇದರಲ್ಲಿ ಬಾವಿಗಳಿಗೆ 25 ಲಕ್ಷ ರೂ. ಕೇಳಿದ್ದಾರೆ. ಬಾವಿಗಳಿಗೆ ಇಲ್ಲಿಯವರೆಗೂ ಕೊಟ್ಟಿರತಕ್ಕ ಹಣವೆಲ್ಲಾ ಲುಕ್ಸಾನಾಗಿದೆ. ಅವುಗಳಲ್ಲಿ 10 ಪರ್ಸೆಂಟ್ ಕೂಡ ಪೂರ್ತಿಯಾಗಿಲ್ಲ. ಹೀಗಾಗಿ ಇವುಗಳಿಗೆ ಖರ್ಚುಮಾಡಿರತಕ್ಕ ಹಣವೆಲ್ಲಾ ವ್ಯರ್ಥವಾದಂತಾಗಿದೆ. ಹೀಗೆ ಇವುಗಳಿಗೆ ಹಣವನ್ನು ವ್ಯಯಮಾಡುವ ಬದಲು ಕೆರೆಗಳ ಜೀರ್ಣೋದ್ಧಾರ ಕಾರ್ಯವನ್ನಾದರೂ ಮಾಡಿದರೆ ಅದರಿಂದ ಉತ್ತಮ ಫಲ ಸಿಕ್ಕುತ್ತೆ. ಆದುದರಿಂದ ಕೆರೆಗಳ ರಿಪೇರಿಗೆ ಹೆಚ್ಚು ಹಣವನ್ನು ಒದಗಿಸಬೇಕೆಂದು ನಾನು ಹೇಳುತ್ತೇನೆ. ಬಾವಿಗಳಿಗೆ ಖರ್ಚಾಗಿರತಕ್ಕ ಹಣವನ್ನೂ ಅಲ್ಲಿ ಬೆಳೆಯಾಗಿರತಕ್ಕ ಭತ್ತ ಇತ್ಯಾದಿ ಬೆಳೆಗಳನ್ನು ನೋಡಿದರೆ ಒಂದಕ್ಕೊಂದಕ್ಕೆ ಹೋಲಿಕೆ ಇರುವುದಿಲ್ಲ. ಬಾವಿಗಳಿಗೆ ವಿದ್ಯುಚ್ಛಕ್ತಿಯ ಬಾಬಿನಲ್ಲೂ ಮತ್ತು ಇನ್ನಿತರೇ ಬಾಬಿನಲ್ಲೂ ಹಣವನ್ನು ಒದಗಿಸಲಾಗುತ್ತಿದೆ. ಆದರೆ ಕೆರೆಗಳ ದುರಸ್ತಿಗೆ ಒದಗಿಸಿರತಕ್ಕ ಹಣ ಬಹಳ ಕಡಿಮೆ. ಕೆರೆಗಳು ಇಲ್ಲದ ಕಡೆ ಬಾವಿಗೆ ಹಣವನ್ನು ಕೊಡಲಿ ಅದಕ್ಕೆ ನಾನು ಬೇಡವೆನ್ನುವುದಿಲ್ಲ.

ಅಧ್ಯಕ್ಷರು.—ಶ್ರೀ ಭಾಸ್ಕರ ಶೆಟ್ಟರು ಮಾತನಾಡಬಹುದು.

† ಶ್ರೀ ಭಾಸ್ಕರ ಶೆಟ್ಟಿ (ಕಾಪು).—ಸ್ವಾಮಿ, ನಾನು ಸರ್ಕಾರದವರು ಸಭೆಯ ಮುಂದೆ ಮಂಡಿಸಿರತಕ್ಕ 1966-67 ನೇ ಸಪ್ಲಿಮೆಂಟರಿ ಎರಡನೆ ಇನ್‌ಸ್ಟಾಲ್‌ಮೆಂಟುಗಳ ಬಗ್ಗೆ ಕೇಳಿರತಕ್ಕ 4 ಕೋಟಿ ರೂಪಾಯಿಗಳ ಬೇಡಿಕೆಯನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಆಡಬಯಸುತ್ತೇನೆ.

ಸರ್ಕಾರದವರು ವಾರ್ತಾ ಪ್ರಚಾರದ ಇಲಾಖೆಯ ಬಗ್ಗೆ ಒಂದು ವಿಚಾರವನ್ನು ತಿಳಿಸಬೇಕಾಗಿದೆ. ಈ ಇಲಾಖೆಯಲ್ಲಿ ಜಾಹಿರಾತುಗಳ ಬಗ್ಗೆ 12 ಲಕ್ಷ ರೂಪಾಯಿಗಳನ್ನೂ ಮತ್ತು ಪಬ್ಲಿಕೇಷನ್ ಬಗ್ಗೆ ಒಂದು ಲಕ್ಷ ರೂಪಾಯಿಗಳನ್ನೂ ಕೇಳಿದ್ದಾರೆ. ನೆನ್ನೆ ದಿವಸ ಪ್ರಚಾರಖಾತೆ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾಗ ಮಧ್ಯೆ ಅದು ತಮ್ಮ ಆಡಳಿತಕ್ಕೆ ಖಾತೆಯಾಗಿದೆ ಎಂದು ಆರ್ಥಿಕ ಸಚಿವರು ಮಧ್ಯೆ ಬಾಯಿ ಹಾಕಿ ಜಾಹಿರಾತುಗಳ ಬಗ್ಗೆ ನಾವೇನೂ ತಾರತಮ್ಯ ಮಾಡಿಲ್ಲ ಅನ್ನುವುದಾಗಿ ಕೆಲವು ಅಂಕಿ ಅಂಶಗಳನ್ನು ಕೊಟ್ಟರು. ಆದರೆ ಅವರು ಯಾವ ಯಾವ ಪತ್ರಿಕೆ ಸರ್ಕ್ಯುಲೇಷನ್ ಎಷ್ಟಿದೆ ಎಂಬುದನ್ನು ತಿಳಿಸಲಿಲ್ಲ. ಮತ್ತು ಅವರು ಕೆಲವು ವಾರ ಮತ್ತು ಮಾಸ ಪತ್ರಿಕೆಗಳಿಗೆ ಎಷ್ಟೆಷ್ಟು ಹಣವನ್ನು ಕೊಡಲಾಗಿದೆ ಎಂಬುದನ್ನು ತಿಳಿಸಲಿಲ್ಲ. ಅವರು ಕೆಲವು ದಿನಪತ್ರಿಕೆಗಳ ವಿಚಾರವನ್ನು ಮಾತ್ರ ತಿಳಿಸಿದರು. ಇದರಲ್ಲಿ ನನಗೆ ತಿಳಿದುಬಂದಿರುವಮಟ್ಟಿಗೆ ಕಾಂಗ್ರೆಸ್ ಪುಢಾರಿಗಳನ್ನು ಹೆಚ್ಚಿಗೆ ಹೊಗಳತಕ್ಕ ಮತ್ತು ಅವರ ವಿಚಾರವನ್ನು ಪ್ರಚಾರ ಮಾಡತಕ್ಕ ಪತ್ರಿಕೆಗಳಿಗೆ ಹೆಚ್ಚಿನ ಜಾಹಿರಾತುಗಳನ್ನು ಕೊಟ್ಟಿದ್ದಾರೆಂದು ನನಗೆ ತಿಳಿದುಬಂದಿದೆ. ಇನ್ನು ಈ ಜನಪದ ಪತ್ರಿಕೆಯಲ್ಲಿ ಬರೀ ಮಂತ್ರಿ ಮಾಗಧರ ಹೊಗಳಿಕೆ ವಿನಾ ಬೇರೇನೂ ಇರುವುದಿಲ್ಲ. ಹೀಗೆ ಇವರು ತಮ್ಮ ಪಾರ್ಟಿಯನ್ನು ಬಲಮಾಡಿಕೊಳ್ಳುವುದಕ್ಕಾಗಿ ಸರ್ಕಾರದ ಹಣವನ್ನು ಪೋಲು ಮಾಡುತ್ತಿದ್ದಾರೆ. ಸಾರ್ವಜನಿಕರ ಹಣವನ್ನು ಹೀಗೆ ಪೋಲು ಮಾಡತಕ್ಕದ್ದು ನ್ಯಾಯವಲ್ಲ. ಇನ್ನು ಮೈಸೂರು ರಾಜ್ಯದ ಪ್ರಗತಿಯನ್ನು ಪ್ರಕಟಮಾಡುವುದಕ್ಕೆ ವಿಶೇಷ ಹಣವನ್ನು ಕೇಳಿದ್ದಾರೆ. ಆದರೆ ಮೈಸೂರು ರಾಜ್ಯದ ಪ್ರಗತಿ 1956 ರಿಂದ ಪೂರ್ತಿ ಕುಂಠಿತವಾಗಿದೆ ಎಂಬುದಾಗಿ ಡಾ॥ ಲೋಗನಾಥನ್ ಅನ್ನತಕ್ಕವರು ತಮ್ಮ ಟೆಕ್ನೋ ಎಕನಾಮಿಕ್ ಸರ್ವೆ ಎಂಬ ಪುಸ್ತಕದಲ್ಲಿ ಎಡಿಟೋರಿಯಲ್ ಕಾಲಂನಲ್ಲಿ ಪ್ರಕಟ ಮಾಡಿದ್ದಾರೆ. ಹಿಂದೆ 1956 ನೇ ಇಸವಿಯಲ್ಲಿ ಮೈಸೂರು ದೇಶ ಎಷ್ಟು ಪ್ರಗತಿಯಾಗಿತ್ತೋ, ಈಗಲೂ ಸಹ ಅದಕ್ಕಿಂತ ಹೆಚ್ಚು ಪ್ರಗತಿಯಾಗಿಲ್ಲವೆಂದು ಅವರು ಹೇಳಿದ್ದಾರೆ. ತಮ್ಮಗಳ ಪ್ರಶಂಸೆಗೆ ಏನೇನು ಮಾಡಿದ್ದಾರೆ, ಎಂಬುದನ್ನು ಕೇವಲ ಕಾಗದ ಪತ್ರಗಳಲ್ಲಿ ತಿಳಿಸಿದ್ದಾರೆ. ಮೈಸೂರು ಪ್ರಗತಿ ಎಂಬ ಪುಸ್ತಕಗಳನ್ನು ಪ್ರಕಟಿಸಿ ಹಂಚಿದ್ದೀರಿ. ಇದರಿಂದ ಏನೇನೂ ಪ್ರಯೋಜನವಾಗಿಲ್ಲ. 1956 ರಿಂದ 1966 ರವರೆಗೆ ಸಾರ್ವಜನಿಕ ಬೊಕ್ಕಸದಿಂದ ಹಣವನ್ನು ವ್ಯಯ ಮಾಡಿದ್ದಾರೆಯೇ ವಿನಾ ಪ್ರಗತಿಯಾಗಿಲ್ಲ.

(ಶ್ರೀ ಬಿ. ಭಾಸ್ಕರ ಶೆಟ್ಟಿ)

3-00 P.M.

ಡಿಮ್ಯಾಂಡ್ ನಂಬರ್ 10, 20, 44, ಅಂದರೆ ಆಹಾರ, ವ್ಯವಸಾಯ ಮತ್ತು ಸಹಕಾರ, ಈ ಮೂರು ಇಲಾಖೆಗಳನ್ನು ನಾನು ಒಟ್ಟು ತೆಗೆದುಕೊಂಡು ಒಂದೆರಡು ವಿಷಯಗಳನ್ನು ಹೇಳುತ್ತೇನೆ ಈ ಆಹಾರ ಇಲಾಖೆಯಲ್ಲಿ ಹೊಸದಾಗಿ ಆಹಾರಸರಬರಾಜು ಕಮೀಷನರ್ ಒಬ್ಬರನ್ನು ನೇಮಕ ಮಾಡಿದ್ದಾರೆ. ಜೂನ್ ತಿಂಗಳಲ್ಲಿ ನೇಮಕ ಮಾಡಿದ್ದಾರೆ. ಇವರಿಗೆ 2,500 ರೂಪಾಯಿಗಳ, ಸಂಬಳ, ಇತರಭತ್ಯೆ, ವಾಸಕ್ಕೆ ಮನೆ, ಇತ್ಯಾದಿ ಇತ್ಯಾದಿ ಇರಬಹುದು. ನೌಕರಿಗಳನ್ನು ಉತ್ಪತ್ತಿ ಮಾಡುತ್ತೀರೇ ವಿನಾ ವಾಸ್ತವಿಕವಾಗಿ ಆಹಾರ ಉತ್ಪತ್ತಿಯಾಗಿಲ್ಲ. ಈ ಸಂದರ್ಭದಲ್ಲಿ ನಾನು ಅಂಕಿಅಂಶಗಳ ಮೂಲಕ ಈ ವಿಷಯವನ್ನು ತಮ್ಮ ಮುಂದೆ ಇಡಬಯಸುತ್ತೇನೆ. ಆಹಾರ ಉತ್ಪಾದನೆ ವಿಷಯದಲ್ಲಿ ಮಾತ್ರವಲ್ಲದೆ ಆಹಾರವನ್ನು ಗ್ರಾಹಕರಿಗೆ ಹಂಚುವುದರಲ್ಲಿಯೂ ವಿಫಲರಾಗಿದ್ದೀರಿ. ಆಹಾರಧಾನ್ಯಗಳ ಸಾಗಾಣಿಕೆಯಲ್ಲಿ ನಮ್ಮ ರಾಜ್ಯದವರು ಹೊರಗಡೆ ರಾಜ್ಯಗಳಿಗೆ ಆಹಾರಧಾನ್ಯ ಹೋಗದಂತೆ ತಡೆಗಟ್ಟುವುದರಲ್ಲಿ ಏನೇನೂ ಕೆಲಸ ಮಾಡಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ, ಕೇರಳದ ಭಾಗದಲ್ಲಿ ಒಂದೆರಡು ಚೆಕ್–ಪೋಸ್ಟ್ ಮಾಡಿದ್ದೀರಿ. ಅವು ಮಾಮೂಲಿ ಪೋಸ್ಟ್‌ಗಳಾಗಿ ಕೆಲಸ ಮಾಡುತ್ತವೆಯೆ ವಿನಾ ಆಹಾರ ಹೊರಗೆ ಹೋಗುವುದನ್ನು ತಡೆಯುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಿಂದ ಕೇರಳ ಮತ್ತು ಬೊಂಬಾಯಿಗೆ ಅಕ್ಕಿ ಕಳ್ಳಸಾಗಾಣಿಕೆಯಲ್ಲಿ ಹೋಗುತ್ತಿದೆ. ಈ ಬಗ್ಗೆ ನನಗೆ 10-15 ಪತ್ರಗಳು ಬಂದಿವೆ. ನಾಲ್ಕೈದು ಕೇಸುಗಳನ್ನು ಹಿಡಿದಿರುವುದು ನೋಡಿದ್ದೇನೆ. ಕೇರಳದಲ್ಲಿರುವ ಚೆಕ್‌ಪೋಸ್ಟ್‌ನಲ್ಲಿ 1965ರಲ್ಲಿ 100 ರೂಪಾಯಿಗಳ ಲಂಚ ತೆಗೆದುಕೊಳ್ಳುತ್ತಿದ್ದರು. ಈಗ ಅದೇ ಚೆಕ್‌ಪೋಸ್ಟ್‌ನಲ್ಲಿರತಕ್ಕಂಥವರು, ಬೆಲೆಗಳು ಏರಿವೆ, ಎಂದು ಹೇಳಿ, 250 ರೂಪಾಯಿಗಳ ಸಂಭಾವನೆ, ಅಂದರೆ ಲಂಚ ಕೊಡಬೇಕೆಂದು ಕೇಳುತ್ತಿದ್ದಾರೆಂದು ತಿಳಿದುಬಂದಿದೆ. ಈ ವಿಚಾರವನ್ನು ನನ್ನ ಒಬ್ಬ ಮಿತ್ರರು ಹೇಳಿದರು. ಈ ಲಂಚದ ಪ್ರಮಾಣವೂ ಸಹ ಬೆಲೆ ಏರಿಕೆಗೆ ತಕ್ಕಂಥೆ ಹೆಚ್ಚುತ್ತಾ ಹೋಗುತ್ತಿದೆ.

ಇನ್ನು ವ್ಯವಸಾಯ ಇಲಾಖೆ. ಗೊಬ್ಬರವನ್ನು ಬೊಂಬಾಯಿ, ಮದ್ರಾಸ್‌ನಿಂದ ಸಾಗಿಸುವುದಕ್ಕಾಗಿ ಹೊಸದಾಗಿ ನೌಕರರನ್ನು ತಾವು ನೇಮಕ ಮಾಡುತ್ತಿದ್ದೀರಿ. ಅದಕ್ಕಾಗಿ ಈ ಡಿಮ್ಯಾಂಡ್‌ನಲ್ಲಿ ಹಣವನ್ನು ಕೇಳಿದ್ದೀರಿ. ಸ್ವಾಮಿ, ಈ ಗೊಬ್ಬರದ ಹಂಚಿಕೆ ಗೊಬ್ಬರದಷ್ಟೇ ಗಲೀಜಾಗಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ಸಂದರ್ಭದಲ್ಲೂ ಗೊಬ್ಬರ ಸಿಕ್ಕುವುದಿಲ್ಲ. ಒಂದೊಂದು ಸಾರಿ ವ್ಯವಸಾಯದ ಕಾಲ ಮುಗಿದ ಮೇಲೆ ಗೊಬ್ಬರ ಬರುತ್ತದೆ. ತಾಲ್ಲೋಕ್ ಮಾರ್ಕೆಟಿಂಗ್ ಸೊಸೈಟಿಯವರು ಮತ್ತು ಇತರ ಸಂಸ್ಥೆಗಳು ಗೊಬ್ಬರವನ್ನು ತರಿಸುತ್ತಾರೆ. ಆದರೆ ನಿಜವಾಗಿ ಗೊಬ್ಬರ ಯಾರಿಗೆ ಸಿಗಬೇಕೋ ಅವರಿಗೆ ಸಿಗುವುದಿಲ್ಲ. ನಮ್ಮ ಮಂಗಳೂರು ತಾಲ್ಲೋಕ್ ಮಾರ್ಕೆಟಿಂಗ್ ಸೊಸೈಟಿಯ ವಿಚಾರ ಹೇಳುವುದಾದರೆ, ಅಲ್ಲಿಗೆ 89 ಸಾವಿರ ರೂಪಾಯಿಗಳ ಗೊಬ್ಬರ ರೈಲ್ವೆಯಿಂದ ಬಂದು ಗೋಡೌನ್‌ಗೆ ಹೋಗದೆ ಬೇರೆಲ್ಲಿಗೋ ಹೋಯಿತು. ಯಾರೋ ಕಾಫಿ ಪ್ಲಾಂಟರ್ ಅದನ್ನು ಸಾಗಿಸಿದ್ದಾರೆ. ಈ ರೀತಿ ಸಾಗಿಸುವಲ್ಲಿ, ಸೊಸೈಟಿಯ ಅಧಿಕಾರಿಗಳು, ಸಿಬ್ಬಂಧಿಯವರು, ಮತ್ತು ಅಲ್ಲಿಯ ತಾಲ್ಲೋಕ್ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟರು ಸೇರಿದ್ದಾರೆ. ಈ ವಿಷಯ ತನಿಖೆಗೆ ಬಂದಿಲ್ಲ. ಗೊಬ್ಬರವನ್ನು ಕೂಡ ತಾವು ಕಾಂಗ್ರೆಸ್ ಸಂಸ್ಥೆಯ ಅಭಿವೃದ್ಧಿಗಾಗಿ, ಬೆಳವಣಿಗೆಗಾಗಿ ಉಪಯೋಗಿಸುವ ಕಾಲ ಬಂದಿದೆ. ವ್ಯವಸಾಯದ ಉಪಯೋಗಕ್ಕಾಗಿ ಗೊಬ್ಬರ ಹೋಗುತ್ತಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಈ ಪೂರಕ ಬೇಡಿಕೆಗಳನ್ನು ನಾನು ನಾಲ್ಕು ವಿಧವಾಗಿ ವಿಂಗಡಿಸುತ್ತೇನೆ. ಮೊದಲನೆಯದು, ಯಾವ ಬೇಡಿಕೆಗಳ ಬಗ್ಗೆ ಕೇವಲ ಟೋಕನ್ ಹಣವನ್ನು ಮಾತ್ರ ಕೇಳಿದ್ದೇವೆ : ಅದು. ಎರಡನೆಯದು ಯಾವ ಖರ್ಚಿನ ಬಾಬುಗಳ ವಿಚಾರದಲ್ಲಿ ಕೇಂದ್ರ ಸರ್ಕಾರದಿಂದ ಈಗಾಗಲೆ ನಮಗೆ ಹಣ ದೊರೆತಿದೆ ಅದಕ್ಕೆ ಸಂಬಂಧಪಟ್ಟ ಬೇಡಿಕೆಗಳು. ಮೂರನೆಯದಾಗಿ ಲೆಕ್ಕಪತ್ರದ ಅಜೆಸ್ಟ್‌ಮೆಂಟ್ ಸಲುವಾಗಿ ಮಾಡತಕ್ಕಂಥ ಬೇಡಿಕೆಗಳು : ಮತ್ತು ನಾಲ್ಕನೆಯದಾಗಿ ಯಾವ ಖರ್ಚಿನ ಬಾಬುಗಳ ಬಗ್ಗೆ ಬಡ್ಜೆಟ್‌ನಲ್ಲಿ ನಾವು ಹಣ ಒದಗಿಸಲಿಲ್ಲ ಮತ್ತು ಈಗ ಹಣ ಒದಗಿಸಬೇಕಾಗಿದೆ ಅಂತಹ ಬೇಡಿಕೆಗಳು. ಈಗ ರೀತಿಯಾಗಿ ನಾವು ಇದನ್ನು ವಿಂಗಡಿಸಿ ನೋಡಿದಾಗ ಹೊಸದಾಗಿ ಬಡ್ಜೆಟ್‌ನಲ್ಲಿ ಹಿಂದೆ ಸೇರದೆ ಈಗ ಸೇರಿಸಿರತಕ್ಕಂಥ ಬಾಬುಗಳಿಗೆ ಸಂಬಂಧಪಟ್ಟ ಖರ್ಚು ಕೇವಲ ಒಂದು ಕೋಟಿ 62 ಲಕ್ಷ ಚಿಲ್ಲರೆಯಾಗುತ್ತದೆ. ಈ ಒಂದು ಕೋಟಿ 62 ಲಕ್ಷದಲ್ಲಿ ಒಂದು ಕೋಟಿ ರೂಪಾಯಿಗಳನ್ನು ನಾವು ಸಹಕಾರ ಸಂಘಗಳಿಗೆ ಷೇರ್ ಕ್ಯಾಪಿಟಲ್ ರೂಪದಲ್ಲಿ ಒದಗಿಸಿಕೊಟ್ಟಿರುವುದು. ಈ ಹಣವನ್ನೂ ಸಹ ಕೇಂದ್ರ ಸರ್ಕಾರದಿಂದ ನಾವು ಪಡೆಯುತ್ತೇವೆ ಎನ್ನುವ ಭರವಸೆ ಇದೆ. ಆದ್ದರಿಂದ ನಾವು ನಿಜವಾಗಿ ನೋಡಿದಾಗ real outgo of

money ನಮ್ಮ ಬೊಕ್ಕಸದಿಂದ ನಿಜವಾಗಿಯೂ ಖರ್ಚಾಗುವ ರೊಕ್ಕ ಕೇವಲ 62·574 ಲಕ್ಷ ಮಾತ್ರ. ಈ ವಿಚಾರವನ್ನು ಮಾನ್ಯ ಸದಸ್ಯರು ಮೊಟ್ಟಮೊದಲಿಗೆ ಗಮನಿಸಬೇಕು. ಈಗ ಹೊಸದಾಗಿ ನಾವು ಸೇರಿಸತಕ್ಕಂಥ ಬಾಬುಗಳ ವಿಚಾರ ನಾನು ಹೇಳಿದೆ. ಅವು ಈ ಮುಂದಿನ ಬೇಡಿಕೆಗಳಿಗೆ ಸಂಬಂಧಪಟ್ಟವು. ಅವುಗಳು ಯಾವುವೆಂದರೆ, 9, 10, 15, 21, 26, 30A, 31, 44, 48 ಮತ್ತು 54. ನಾನು ಬಹಳ ದೀರ್ಘವಾಗಿ ಮಾತನಾಡುವುದಕ್ಕೆ ಇಷ್ಟ ಪಡುವುದಿಲ್ಲ. ಆದರೆ ಸಂಕ್ಷಿಪ್ತವಾಗಿ ಒಂದೊಂದು ಮಾತನ್ನು ಒಂದೊಂದು ಬೇಡಿಕೆಯ ಅಗತ್ಯದ ಸಂಬಂಧದಲ್ಲಿ ಹೇಳಲೇ ಬೇಕಾಗುತ್ತದೆ.

ಬೇಡಿಕೆ ನಂಬರ್ 9. ಇದು ಚುನಾವಣಾ ವ್ಯವಸ್ಥೆಗೆ ಸಂಬಂಧಪಟ್ಟಂಥ ಮತ್ತು ಸಿಬ್ಬಂದಿಗೆ ಸಂಬಂಧಪಟ್ಟಂಥ ಬೇಡಿಕೆ. ಶ್ರೀಮಾನ್ ಶಿವಪ್ಪನವರು ಚುನಾವಣಾ ಬಗ್ಗೆ ಏಕೆ ಖರ್ಚು ಮಾಡಬೇಕು, ಮತ್ತು ಮಂತ್ರಿಗಳು ಸರ್ಕಾರದ ಖರ್ಚಿನಲ್ಲಿ ಚುನಾವಣೆಯ ಪ್ರಚಾರ ಮಾಡುತ್ತಾರೆ ಮತ್ತು ಚುನಾವಣೆಗೆ ಮೂರು ತಿಂಗಳುಗಳ ಮೊದಲೇ ಮಂತ್ರಿಗಳು ರಾಜೀನಾಮೆ ಕೊಡಬೇಕು ಎನ್ನುವುದನ್ನು ಸೂಚನೆ ಮಾಡಿದರು. ಪ್ರಜಾಪ್ರಭುತ್ವ ನಮ್ಮ ದೇಶದಲ್ಲಿ ಅಷ್ಟೇ ಅಲ್ಲದೆ, ಪ್ರಪಂಚದ ಇನ್ನೂ ಅನೇಕ ದೇಶಗಳಲ್ಲಿ ಅಸ್ತಿತ್ವದಲ್ಲಿದೆ. ಆದರೆ ಯಾವ ದೇಶದಲ್ಲಿಯೂ ಚುನಾವಣೆಗೆ ಮೂರು ತಿಂಗಳುಗಳ ಮೊದಲೇ ಆಗಲಿ ಅಥವಾ ಆರು ತಿಂಗಳುಗಳಿಗೆ ಮೇಲ್ಪಟ್ಟು ಆಗಲೀ ಅಸ್ತಿತ್ವದಲ್ಲಿರತಕ್ಕ ಸರ್ಕಾರ ರಾಜೀನಾಮೆ ಕೊಡತಕ್ಕ ಪದ್ಧತಿ ಎಲ್ಲಿಯೂ ಇಲ್ಲ. ನಾವು ಈಗ ಎದುರಿಸತಕ್ಕಂಥಾದ್ದು ನಾಲ್ಕನೇ ಚುನಾವಣೆ. ಮೂರು ಚುನಾವಣೆಗಳಲ್ಲಿಯೂ ಕೇಂದ್ರ ಸರ್ಕಾರದಿಂದಾಗಲೀ ಅಥವಾ ರಾಜ್ಯಗಳ ಸರ್ಕಾರದಿಂದಾಗಲೀ ಹಸ್ತಕ್ಷೇಪ ಮಾಡಿದೆ ಮತ್ತು ಚುನಾವಣೆ ಫಲಿತಾಂಶಗಳು ಸರ್ಕಾರದ ಪ್ರಭಾವದಿಂದ ಅಥವಾ ಹಸ್ತಕ್ಷೇಪದಿಂದ ಅವು ಬದಲಾವಣೆಯಾಗಿವೆ ಎಂಬ ಅಪಾದನೆಯನ್ನು ಇವತ್ತಿನವರೆಗೂ ಯಾರೂ ಮಾಡಲಿಲ್ಲ. ಎಲ್ಲೂ ಮಾಡಲಿಲ್ಲ. ಕೇವಲ ನಮ್ಮ ದೇಶದಲ್ಲಿಯೇ ಅಲ್ಲ. ಈ ದೇಶದಲ್ಲಿ ಚುನಾವಣೆ ನಿಷ್ಪಕ್ಷಪಾತವಾದ ಮತ್ತು ನಿರ್ಭೀತವಾದ ವಾತಾವರಣದಲ್ಲಿ ನಡೆಯುತ್ತಿದೆ ಎನ್ನುವ ಬಗ್ಗೆ ಬೇರೆ ದೇಶದವರು ನಮ್ಮನ್ನು ಪ್ರಶಂಸೆ ಮಾಡಿದ್ದಾರೆ, ಹೊಗಳಿಕೆ ಮಾಡಿದ್ದಾರೆ. ಆ ಮಾತು ಬೇರೆ. ಮತ್ತೊಂದು ವಿಚಾರವನ್ನು ಶ್ರೀಮಾನ್ ಶಿವಪ್ಪನವರು ಹಾಗೂ ಇನ್ನೊಬ್ಬ ಸದಸ್ಯರು ಹೇಳಿದರು. ಚುನಾವಣೆ ಹತ್ತಿರ ಹತ್ತಿರಕ್ಕೆ ಬಂದಾಗ ಸರ್ಕಾರದವರು ಎಲ್ಲಾ ರೀತಿಯ ಕೆಲಸಗಳನ್ನೂ ಬಹಳ ಜಾಗ್ರತೆಯಾಗಿ ಮಾಡಲು ಪ್ರಯತ್ನ ಮಾಡುತ್ತಿದ್ದಾರೆಂದು. ಇದನ್ನು ಯಾರು ಹೇಳಿದರೋ ನನಗೆ ಮರೆತು ಹೋಗಿದೆ. ಸರ್ಕಾರಕ್ಕೆ ಸೇರಿರುವ ಎಲ್ಲಾ ಜಮೀನುಗಳನ್ನೂ ತಾವು ಚುನಾವಣೆಯಲ್ಲಿ ಗೆಲ್ಲುವುದಕ್ಕೆ ಹಂಚುತ್ತಿದ್ದಾರೆ, ಅದನ್ನು ತಡೆಯಲು ಅದಕ್ಕೊಂದು ಸುಗ್ರೀವಾಜ್ಞೆಯನ್ನು ಹೊರಡಿಸಬೇಕೆಂದು ಹೇಳಿದರು. ಅದನ್ನು ಶ್ರೀಮಾನ್ ಶಿವಪ್ಪನವರು ಹೇಳಿದ ಹಾಗೆ ನನಗೆ ನೆನಪು. ಈ ಸಂದರ್ಭದಲ್ಲಿ ನಾನು ಅವರಿಗೆ ಒಂದು ಮಾತನ್ನು ಹೇಳುತ್ತೇನೆ. ಇಲ್ಲಿ ಮೂರು ಸಲ ಚುನಾವಣೆಗಳಾದಾಗಲೂ ಇದೇ ಪಕ್ಷವೇ ಅಧಿಕಾರದಲ್ಲಿತ್ತು. ಒಮ್ಮೊಂದೊಮ್ಮೆ ದುರ್ಮಾರ್ಗದಿಂದ ಆಶೆಯನ್ನು ತೋರಿಸಿ ಆಡಳಿತ ಪಕ್ಷಕ್ಕೆ ಚುನಾವಣೆಯಲ್ಲಿ ಗೆಲುವನ್ನುಂಟು ಮಾಡಬೇಕು, ಜನರ ಓಟನ್ನು ಸಂಪಾದಿಸಬೇಕೆಂದು ಹೇಳಿದ್ದರೆ ಇಷ್ಟರವರೆಗೂ ಸರ್ಕಾರದ ಖಜಾನೆ ಅಥವಾ ಬೊಕ್ಕಸದಲ್ಲಿ ಏನೇನೂ ಕೂಡ ಉಳಿಯುತ್ತಿರಲಿಲ್ಲ. ಎಲ್ಲವೂ ಖರ್ಚಾಗುತ್ತಿತ್ತು. ಆದ್ದರಿಂದ ಮಾನ್ಯ ಸದಸ್ಯರಿಗೆ ಒಂದು ಮಾತನ್ನು ಹೇಳುತ್ತೇನೆ. ಈ ತರಹ ಒಂದು ಭಯ, ಸಂಶಯಗಳು ಬುಡಪಿಲ್ಲದ್ದು ಆಗಿದೆ. ಇಂತಹ ಸಂದೇಹಕ್ಕೆ, ಭಯಕ್ಕೆ ಆಧಾರವೇ ಇಲ್ಲ.

ಬೇಡಿಕೆ 9ರ ಬಗ್ಗೆ ಹೇಳುವುದಾದರೆ ಅತಿ ಅಧಿಕವಾದಂಥ ಖರ್ಚನ್ನು ಮಾಡಬೇಕಾಗಿ ಬಂತು. ಅದು ಅನಿವಾರ್ಯವಾದುದು, ಮಾಡಲೇಬೇಕು.

ಇನ್ನು ಬೇಡಿಕೆ 10. ಇದು ಹೊಸದಾಗಿ ನೇಮಕ ಮಾಡಿದಂಥ ಅಧಿಕಾರಿ ಮತ್ತು ಸಿಬ್ಬಂದಿ ಬಗ್ಗೆ ಇದೆ. ಇದರಲ್ಲಿ ಆಹಾರ ಸಮಸ್ಯೆ ಬಂತು. ಗೋಡೌನ್, ಆಹಾರ ಶೇಖರಣೆ ಆಹಾರೋತ್ಪಾದನೆ ವಿಷಯಗಳಲ್ಲಿ ಬೇರೆ ಬೇರೆ ಖಾತೆಗಳಿಗೆ ಸಂಬಂಧಪಟ್ಟ ಕೆಲಸವಿದ್ದುದರಿಂದ ಎಲ್ಲಾ ಖಾತೆಯ ಕೆಲಸಗಳನ್ನೂ ಕೊ-ಆರ್ಡಿನೇಟ್ ಮಾಡಿ ಸಮತೋಲನಾ ದೃಷ್ಟಿಯಿಂದ ನಡೆಯಬೇಕೆಂದು ಕೇಂದ್ರ ಸರ್ಕಾರದಿಂದ ಆದೇಶ ಬಂತು. ಅದನ್ನು ಮಾಡಲೇಬೇಕು.

ಇನ್ನು ಬೇಡಿಕೆ 15. ಈ ವಿಚಾರದಲ್ಲಿ ನಾನು ನಿನ್ನೆಯೇ ಮಾನ್ಯ ಸದಸ್ಯರು ಮಾಡಿದಂಥ ಟೀಕೆಗಳಿಗೆ ಉತ್ತರ ಕೊಟ್ಟಿದ್ದೇನೆ. ಇನ್‌ಫರ್‌ಮೇಶನ್ ಮತ್ತು ಪಬ್ಲಿಸಿಟಿಗೆ ಸಂಬಂಧಪಟ್ಟ ಖಾತೆಯ ಬಗ್ಗೆ ಶ್ರೀ ಭಾಸ್ಕರ ಶೆಟ್ಟಿ ಅವರು ಒಂದು ಮಾತನ್ನು ಹೇಳಿದರು, ಅಡ್ವರ್ಟೈಜ್‌ಮೆಂಟ್ ಕೊಡುವ ವಿಚಾರದಲ್ಲಿ ಬೇರೆ ಬೇರೆಯಾಗಿ ಕೇವಲ ದಿನ ಪತ್ರಿಕೆಗಳಿಗೆ ಎಷ್ಟೋ ಅಡ್ವರ್ಟೈಜ್‌ಮೆಂಟುಗಳನ್ನು ಕೊಟ್ಟಿದ್ದೀರಿ, ಆದರೆ ಯಾವ್ಯಾವ ವಾರ ಪತ್ರಿಕೆ, ಮಾಸ ಪತ್ರಿಕೆ ಮತ್ತು ದಿನ ಪತ್ರಿಕೆಗಳಿಗೆ ಎಷ್ಟೆಷ್ಟು ಕಮರ್ಷಿಯಲ್ ಅಡ್ವರ್ಟೈಜ್‌ಮೆಂಟುಗಳನ್ನು ಕೊಟ್ಟಿದ್ದೀರಿ ಎಂದು. ನಾವು ಈಗಾಗಲೇ ಸರ್ಕಾರೀ ಆರ್ಡರ್ ಮುಖಾಂತರ ಒಂದು ಆಜ್ಞೆಯನ್ನು ಹೊರಡಿಸಿದ್ದೇವೆ. ನಾನು ಅದನ್ನು ಈ ಸಭೆಯ ಮೇಜಿನ ಮೇಲೆ ಇಡಲಿಕ್ಕೆ ಸಿದ್ಧನಾಗಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕಮರ್ಷಿಯಲ್ ಅಡ್ವರ್ಟೈಜ್‌ಮೆಂಟ್ ವಿಷಯ ಮಾತ್ರ ಹೇಳುತ್ತಿದ್ದೀರಿ. Casual Advertisement ಮತ್ತು tender notifications ವಿಷಯವಾಗಿ ಸ್ವಲ್ಪ ಹೇಳುತ್ತೀರಾ ? Will you kindly place these on the Table of the House ?

ಶ್ರೀ ರಾಮಕೃಷ್ಣ ಹೆಗಡೆ.—ಯಾವ್ಯಾವ ಪತ್ರಿಕೆಗಳಿಗೆ ಎಷ್ಟೆಷ್ಟು ಎಂಥೆಂಥ ಐಟಂಗಳನ್ನು ಕೊಟ್ಟಿದ್ದೇವೆಂದು ಹೇಳುವುದನ್ನು ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ. I have absolutely no objection to place it just now.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆ ವಿಷಯಗಳನ್ನೂ ಸಹ ಈ ಸಭೆಯ ಮುಂದೆ ಇಟ್ಟರೆ ನಾವು ನೋಡಬಹುದು.

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನೂ ಕೂಡ ಕೊಡುತ್ತೇನೆ. ಒಂದು ವಿಚಾರ ನನಗೆ ಅರ್ಥವಾಗಲಿಲ್ಲ. ಇನ್‌ಫರ್‌ಮೇಷನ್ ಡಿಪಾರ್ಟ್‌ಮೆಂಟಿನ ಮೇಲೆ ಈ ಸಲ ಏಕೆ ಇಷ್ಟೊಂದು ವಕ್ರದೃಷ್ಟಿ ನಮ್ಮ ವಿರೋಧಪಕ್ಷದ ಮಾನ್ಯ ಸದಸ್ಯರದು ಎಂಬುದು ಗೊತ್ತಾಗಲಿಲ್ಲ. ಒಮ್ಮೆ ಚುರುಕಾಗಿ ಕೆಲಸ ಮಾಡುತ್ತಿದೆ ಎನ್ನುವ ದೃಷ್ಟಿಯಿಂದಲೋ ಅಥವಾ ಸರ್ಕಾರ ಮಾಡತಕ್ಕ ಕೆಲಸದಲ್ಲಿ ಏನೇನು ಪ್ರಗತಿಯಾಗಿದೆ, ಏನೇನು ಸಾಧನೆಯಾಗಿದೆ ಎಂಬುದನ್ನು ಸರಿಯಾಗಿ ಜನತೆಗೆ ತಿಳಿಸುತ್ತಿಲ್ಲ ಎನ್ನುವ ದೃಷ್ಟಿಯಿಂದಲೋ, ಅಥವಾ ಆ ಇಲಾಖೆ ಸಮಾಚಾರಗಳನ್ನು ಜನತೆಗೆ ತಿಳಿಸುವುದರಲ್ಲಿ ಏನಾದರೂ ಒಂದು ವೇದನೆ ಇತ್ತೋ ಏನೋ ಗೊತ್ತಿಲ್ಲ. ಆ ರೀತಿ ಏನೂ ಇಲ್ಲದಿದ್ದರೆ ಇವತ್ತಿನವರೆಗೂ ವಿರೋಧಪಕ್ಷದವರ ಟೀಕೆಗಳಿಗೆ ಗುರಿಯಾಗದಂತಹ ಈ ಇಲಾಖೆ ಒಮ್ಮೆಯೇ ಅದರ ಮೇಲೆ ಟೀಕೆ ಮಾಡಲು ಏನು ಕಾರಣ ಬಂತು ಎಂದು ನನಗೆ ಸ್ವಲ್ಪ ಸಂಶಯವಾಗಿದೆ.

Sri C. J. MUCKANNAPPA.—This department is dominated by one community, *i.e.*, Lingayats. You changed the Director of Information. ನಾನು ಹೇಳಿದ್ದು ತಪ್ಪೋ ?

Mr. SPEAKER.—He makes a serious allegation. The member should have courtesy to hear the reply patiently.

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರದಲ್ಲಿ ನಾನು ಹೆಚ್ಚು ಭಾಷಣವನ್ನು ಬೆಳೆಸಲಿಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಿಮಗೆ ಕಷ್ಟ.

ಶ್ರೀ ರಾಮಕೃಷ್ಣ ಹೆಗಡೆ.—ಕಷ್ಟ ಏನೇನೂ ಇಲ್ಲ. ಹೆಚ್ಚು ಸಮಯ ಈಗ ಇಲ್ಲ. ಕೆಲವು ಬೇರೆ ಬೇರೆ ಮುಖ್ಯ ವಿಷಯಗಳು ಬಿಟ್ಟು ಹೋಗುತ್ತವೆಂದು ನಾನು ಹೆಚ್ಚಿಗೆ ವಿಚಾರಗಳನ್ನು ಪ್ರಸ್ತಾಪ ಮಾಡುವುದಿಲ್ಲ.

ಇನ್ನು ಡಿಮ್ಯಾಂಡ್ ನಂಬರ್ 21. ಇದು establishment of Taluk staff of Mysore Divisionಗೆ ಸೇರಿದ್ದು. ಇದೂ ಕೂಡ ಅನಿವಾರ್ಯವಾದಂಥ ಐಟಂ. ಇದರಲ್ಲಿ ನಾವು ತೋರಿಸಿರ ತಕ್ಕಂಥ ಖರ್ಚು ಬಹಳ ಕಡಿಮೆ ಅಷ್ಟೆ.

ಇನ್ನು ಬೇಡಿಕೆ ನಂಬರ್ 26. ಆ ವಿಚಾರದಲ್ಲಿ ಕೆಲವು ಮಾನ್ಯ ಸದಸ್ಯರು ಟೀಕೆ ಮಾಡಿದರು. ಆದರೆ ಇದರಲ್ಲಿ ಕೊಟ್ಟಿರತಕ್ಕ ವಿವರಣೆ ನೋಡಿದರೆ ಸ್ವಯಂವೇದ್ಯವಿದೆ. ಯಾವ ಕಾರಣದಿಂದ ಈ ಖರ್ಚನ್ನು ಮಾಡತಕ್ಕ ಪ್ರಸಂಗ ಬಂದಿದೆ ಎಂದರೆ, ಕೋರ್ಟಿನವರು ಅವಾರ್ಡ್ ಮಾಡಿದ್ದಾರೆ, ಅದನ್ನು ಒಪ್ಪಿಕೊಳ್ಳದೆ ನಮಗೆ ಗತ್ಯಂತರವಿಲ್ಲ. ಆದುದರಿಂದ ಈ ಖರ್ಚನ್ನು ನಾವು ಮಾಡಲೇ ಬೇಕಾಗುತ್ತದೆ.

ಮುಂದಿನ ಬೇಡಿಕೆ ನಂಬರ್ 30 (ಎ). ಇದು ಶರಾವತಿ ವ್ಯಾಲಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ನಲ್ಲಿ ಮೇಂಟನೆನ್ಸಿಗೆ ಬೇಕಾಗಿರತಕ್ಕ ಖರ್ಚು. ನಿನ್ನೆ ಶ್ರೀಮಾನ್ ಲಕ್ಕಪ್ಪನವರು ಮತ್ತು ಇನ್ನೂ ಇತರರು ಪುನಃ ಹಳೇ ಪುರಾಣ ಶುರು ಮಾಡಿ, ಶರಾವತಿಗೆ ಹೆಚ್ಚು ಖರ್ಚು ಆಗಿದೆ, ಅವಕ್ಕೆ ಎನ್‌ಕ್ವೈರಿ ಮಾಡಿಲ್ಲ ಎಂದು ಹೇಳಿದರು. ಅದಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ಅಲ್ಲಿ ಮೇಂಟನೆನ್ಸಿ ಸಿಬ್ಬಂದಿ ಬೇಕಾಗುತ್ತದೆ. ಅದನ್ನು ನಾವು ಬಡ್ಜೆಟ್ಟಿನೊಳಗೆ ಸೇರಿಸಿರಲಿಲ್ಲ.

ಶ್ರೀ ಹೆಚ್. ಆರ್. ಕೇಶವಮೂರ್ತಿ (ಗಂಡಸಿ).—ಬಿರುಕು ಬಿಟ್ಟಿದೆ. ಆ ಬಿರುಕುಗಳಿಗೆ ಸಿಮೆಂಟ್ ಪಂಪ್ ಮಾಡಿ ತುಂಬಿಸುತ್ತಾ ಇರುವುದು.

ಶ್ರೀ ರಾಮಕೃಷ್ಣ ಹೆಗಡೆ.—ಆಮೇಲೆ ಬೇಡಿಕೆ ನಂಬರ್ 31. ಇದರ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಇದು ಗದಗ್, ಬೆಟಗೇರಿ, ಗುಲ್ಬರ್ಗಾ ವಾಟರ್ ಸಪ್ಲೈಗಾಗಿ ವಿಶೇಷ ಸಿಬ್ಬಂದಿಗೆ ಸಂಬಂಧಪಟ್ಟದ್ದು.

ಆಮೇಲೆ ಬೇಡಿಕೆ ನಂಬರ್ 44. ಕೋ-ಆಪರೇಟೀವ್ ಸಂಸ್ಥೆಗಳಿಗೆ ಸಂಬಂಧಪಟ್ಟ ಷೇರ್ ಕ್ಯಾಪಿಟಲ್ ಮತ್ತು ಇನ್ನೂ ಇತರ ಸಹಾಯವನ್ನು ಕೊಡುವುದಕ್ಕೆ ಸಂಬಂಧಪಟ್ಟ ಬೇಡಿಕೆಗಳು.

ಮಾನ್ಯ ಅಧ್ಯಕ್ಷರೇ, ಕೆಲವು ಸದಸ್ಯರು ಸಹಕಾರ ಸಂಘಗಳ ವ್ಯವಹಾರದ ಬಗ್ಗೆ ಅನೇಕ ರೀತಿಯ ಟೀಕೆಗಳನ್ನು ಮಾಡಿದ್ದಾರೆ. ಅಂತಹ ಟೀಕೆಗಳನ್ನು ಮೊದಲೂ ಮಾಡಿದ್ದಾರೆ. ನಿನ್ನೆ ಇದಕ್ಕೆ ಸಂಬಂಧ ಪಟ್ಟಂತೆ ಒಂದು ಪ್ರಶ್ನೆಯು ಮೇಲಿನ ಮನೆಯಲ್ಲಿ ಬಂತು. ಈ ಮನೆಯಲ್ಲೂ ಕೆಲವು ಪ್ರಶ್ನೆಗಳು ಬಂದವು. ಈ ಪ್ರಶ್ನೆಗಳು ಬಂದಾಗ ಸಂಬಂಧಪಟ್ಟ ಮಂತ್ರಿಗಳು ಅದಕ್ಕೆ ಸರಿಯಾದ ಉತ್ತರ ಕೊಟ್ಟಿ ದ್ದಾರೆ. ಎಲ್ಲಾ ಸಹಕಾರ ಸಂಘಗಳು 100ಕ್ಕೆ 100 ಅತ್ಯಂತ ತೃಪ್ತಿಕರವಾದ ರೀತಿಯಲ್ಲಿ ಕೆಲಸ ಮಾಡುತ್ತವೆ ಎಂದು ಹೇಳುವುದಿಲ್ಲ. ಇವು ಪ್ರಜಾತಂತ್ರದ ಆಧಾರದ ಮೇಲೆ ನಿರ್ಮಾಣವಾದ ಸಂಸ್ಥೆಗಳು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ರಜಾಪ್ರಭುತ್ವದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿರಬೇಕಾದರೆ ಈ ಸಂಸ್ಥೆಗಳು ಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಈ ಸಂಸ್ಥೆಗಳು ಕಾಂಗ್ರೆಸ್ ಅಧಿಕಾರದಲ್ಲಿದ್ದರೂ ಇರುತ್ತದೆ. ವಿರೋಧಪಕ್ಷದವರು ಅಧಿಕಾರಕ್ಕೆ ಬಂದರೂ ಈ ಸಂಸ್ಥೆಗಳು ಇದ್ದೇ ಇರುತ್ತದೆ. ಸ್ವತಂತ್ರದಿಂದ ಆರಿಸಿ ಬಂದವರು ಸರ್ಕಾರ ನಡೆಸಿದರೂ ಇವು ಇರುತ್ತದೆ. ಈ ಸಹಕಾರ ಸಂಘಗಳಲ್ಲಿ ದೋಷ ಇದ್ದರೆ ಅದನ್ನು ಜಾಗರೂಕತೆಯಿಂದ ಮತ್ತು ಎಚ್ಚರಿಕೆಯಿಂದ ನೋಡಿಕೊಳ್ಳುತ್ತೇವೆ ಮತ್ತು ಅವಕ್ಕೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ಇನ್ನು ವಿಶೇಷವಾಗಿ ಹೇಳತಕ್ಕ ಅಗತ್ಯವಿಲ್ಲ.

ಆಮೇಲೆ 48ನೇ ಬೇಡಿಕೆ. ಇದೂ ಕೂಡ ಕೋರ್ಟಿನವರು ತೀರ್ಮಾನ ಮಾಡಿರುವುದರಿಂದ ಹೆಚ್ಚು ಖರ್ಚನ್ನು ಮಾಡತಕ್ಕ ಪ್ರಸಂಗ ಬಂದಿದೆ.

ಸ್ವಾಮಿ, ಸಾಮಾನ್ಯವಾಗಿ ನೇರವಾಗಿ ಖರ್ಚಾಗಿ, ಸಂಬಂಧಪಟ್ಟ ಕೆಲವು ಬೇಡಿಕೆ ವಿಚಾರದಲ್ಲಿ ಈ ಮಾತನ್ನು ಹೇಳಿದೆ. ಇವೊತ್ತು ಶ್ರೀಮಾನ್ ಗೋಪಾಲಗೌಡರು ಎಂ. ಎಸ್. ಕೆ. ಮಿಲ್ಲಿನ ವಿಚಾರ ದಲ್ಲಿ ಮಾತನಾಡಿ ಅದರ ಪರಿಸ್ಥಿತಿ ಸುಧಾರಿಸುವ ಬಗ್ಗೆ ಸರ್ಕಾರದವರು ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದರು. ಇಂದು ಟೆಕ್ಸ್‌ಟೈಲ್ ಇಂಡಸ್ಟ್ರಿ ಇಡೀ ದೇಶದಲ್ಲಿ ಒಂದು ದೊಡ್ಡ ಗಂಡಾಂತರವನ್ನು ಎದುರಿಸುತ್ತಿದೆ, ಒಂದು ಕ್ರೈಸಿಸ್ ಎದುರಿಸುತ್ತಾ ಇದೆ. ಮೈಸೂರು ರಾಜ್ಯದಲ್ಲಿ ಅಷ್ಟೇ ಅಲ್ಲ. ದೇಶದ ಬೇರೆ ಬೇರೆ ಭಾಗಗಳಲ್ಲೂ ಅನೇಕ ಕಡೆ ಟೆಕ್ಸ್‌ಟೈಲ್ ಮಿಲ್ಲುಗಳು ಮುಚ್ಚಿಹೋಗಿವೆ. ಎಂ. ಎಸ್. ಕೆ. ಮಿಲ್ಲಿಗೆ ಯಾವ ಸಂದರ್ಭದಲ್ಲಿ ಸರ್ಕಾರದವರು ಹಣ ಹಾಕುವ ಪ್ರಸಂಗ ಬಂತು ಎನ್ನುವುದು ಮಾನ್ಯ ಸದಸ್ಯರಿಗೆ ವೇದ್ಯವಾಗಿದೆ. ಈಗ ಸದ್ಯದ ಪರಿಸ್ಥಿತಿಯಲ್ಲಿ ಅದನ್ನು ಸುಧಾರಿಸುವುದಕ್ಕೆ ಎಷ್ಟು ಮಟ್ಟಿಗೆ ಪ್ರಯತ್ನ ಮಾಡಬೇಕೋ ಅಷ್ಟನ್ನು ಮಾಡಿದ್ದೇವೆ. ಈಗಿರುವ ಪರಿಸ್ಥಿತಿ ಸುಧಾರಿಸಿದ ಹೊರತು ಈ ಮಿಲ್ಲಿನ ಪರಿಸ್ಥಿತಿ ಸುಧಾರಿಸುವುದಕ್ಕೆ ಸಾಧ್ಯವಿಲ್ಲ. ಶ್ರೀಮಾನ್ ಗೋಪಾಲಗೌಡರು ಮಿನರ್ವ ಮತ್ತು ಮೈಸೂರು ಮಿಲ್ಲುಗಳ ವಿಚಾರದಲ್ಲಿ ಇದುವರೆಗೂ ಏನೂ ಸಹಾನುಭೂತಿ ತೋರಿಸಿಲ್ಲ ಎಂದು ಹೇಳಿದರು. ಅದು ಸರಿಯಲ್ಲ. ಬಹುಶಃ ಮಾನ್ಯ ಸದಸ್ಯರಿಗೆ ಗೊತ್ತಿದೆಯೋ ಇಲ್ಲವೊ. ಸರ್ಕಾರದವರು ಅವರು ಕೇಳಿದಂತೆ ಸಹಾಯವನ್ನು ಕೊಡ ಲಿಕ್ಕೆ ನಿರ್ಧಾರ ಮಾಡಿದ್ದಾರೆ. ಆದರ ಪ್ರಯೋಜನ ಪಡೆದುಕೊಂಡು, ಗ್ಯಾರಂಟಿ ಆರ್ಡರ್ ಹೊರಟ ಮೂರು ವಾರಗಳಲ್ಲಿ ಮಿಲ್ಲುಗಳನ್ನು ಪುನಃ ಪ್ರಾರಂಭಿಸುತ್ತಾರೆ. ಎನ್ನುವ ಮಾತನ್ನು ಅವರು ಕೊಟ್ಟಿದ್ದಾರೆ. ಅದರಂತೆ ಮಂಡ್ಯ ನ್ಯಾಷನಲ್ ಪೇಪರ್ ಮಿಲ್ಸ್ ಬಹಳ ಕಷ್ಟ ಪರಿಸ್ಥಿತಿಯಲ್ಲಿ ಇದೆ. ಶ್ರೀಮಾನ್ ಗೋಪಾಲಗೌಡರು ಈ ವಿಚಾರದಲ್ಲಿ ನನ್ನನ್ನೂ ಮುಖ್ಯಮಂತ್ರಿಗಳನ್ನೂ ಭೇಟಿ ಯಾಗಿದ್ದರು. 4-6 ತಿಂಗಳಿನಿಂದ ಕಾರ್ಮಿಕರಿಗೆ ಸಂಬಳ ಕೊಟ್ಟಿರಲಿಲ್ಲ. ಸರ್ಕಾರದವರು ಅಷ್ಟೊಂದು ಸರಿಯಾದಂಥ ಕ್ರಮ ಆಗದೇ ಇದ್ದರೂ, ಅದರ ಹಣಕಾಸಿನ ಪರಿಸ್ಥಿತಿ ಚೆನ್ನಾಗಿ ಇಲ್ಲದೇ ಇದ್ದರೂ ಕೂಡ, ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ತೊಂದರೆಯಾಗಕೂಡದು ಎನ್ನುವ ಒಂದು ಉದ್ದೇಶದಿಂದ 5 ಲಕ್ಷ ರೂಪಾಯಿಗಳಿಗೆ ನಾವು ಗ್ಯಾರಂಟಿಯನ್ನು ಕೊಟ್ಟಿದ್ದೇವೆ. ಇದರಿಂದ ಅಲ್ಲಿಯ ಕಾರ್ಮಿಕರ ಸಧ್ಯದ ಸಮಸ್ಯೆ ಪರಿಹಾರವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರೇ, ಇದಕ್ಕೂ ಹೆಚ್ಚಿಗೆ ಹೇಳತಕ್ಕ ಅಗತ್ಯವಿಲ್ಲ. ಆದ್ದರಿಂದ ನಾವು ಮಂಡಿಸಿದ ಬೇಡಿಕೆಗಳನ್ನು ಮಾನ್ಯ ಸಭೆ ಮಂಜೂರು ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

Mr. SPEAKER.—I will now put the Demands to the vote of the House. The question is :

"That further sums not exceeding the amounts mentioned in the Demands Nos. 1, 9, 10, 15, 17, 20, 21, 22, 23, 24, 25, 30A, 31, 33, 44, 48 and 54 be granted to the Government to defray the charges which will come in course of payment during the financial year ending 31st day of March 1967."

The motion was adopted.

As ordered by the Chair, the motion for Demands for grants adopted by the House, are reproduced below :—

DEMAND No. 1.—TAXES ON INCOME OTHER THAN CORPORATION TAX

4. Taxes on Income other than Corporation Tax.

"That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1967, in respect of 'Taxes on Income other than Corporation Tax'."

DEMAND No. 9.—STATE LEGISLATURE AND ELECTIONS

18. Parliament and State Legislatures

"That a further sum not exceeding Rs. 4,97,000 be granted to the Government to defray the charges which will come in course of payment during the financial year for the period ending 31st day of March 1967, in respect of 'Parliament and State Legislatures'."

DEMAND No. 10.—GENERAL ADMINISRATION

19. General Administration

"That a further sum not exceeding Rs. 2,24,010 be granted to the Government to defray the charges which will come in course of payment during the financial year for the period ending 31st day of March 1967, in respect of 'General Administration'."

DEMAND No. 15.—MISCELLANEOUS DEPARTMENTS

26. Miscellaneous Departments

"That a further sum not exceeding Rs. 13,00,000 be granted to the Government to defray the charges which will come in course of payment during the financial year for the period ending 31st day of March 1967, in respect of 'Miscellaneous Departments'."

DEMAND No. 17.—EDUCATION

28. Education

"That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1967, in respect of 'Education'."

DEMAND No. 20.—AGRICULTURE, HORTICULTURE AND FISHERIES

31. Agriculture

"That a further sum not exceeding Rs. 200 be granted to the Government to defray the charges which will come in course of payment during the financial year for the period ending 31st day of March 1967, in respect of 'Agriculture'."

DEMAND No. 21.—RURAL DEVELOPMENT

32. Rural Development

"That a further sum not exceeding Rs. 14,000 be granted to the Government to defray the charges which will come in course of payment during the financial year for the period ending 31st day of March 1967, in respect of 'Rural Development'."

DEMAND No. 22.—ANIMAL HUSBANDRY

33. Animal Husbandry

"That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1967, in respect of 'Animal Husbandry'."

DEMAND No. 23—CO-OPERATION.

34. Co-operation.

"That a further sum not exceeding Rs. 500 be granted to the Government to defray the charges which will come in course of payment during the financial year for the period ending 31st day of March 1967, in respect of 'Co-operation'."

DEMAND No. 24.—INDUSTRIES INCLUDING SERICULTURE.

35. Industries.

"That a further sum not exceeding Rs. 100 be granted to the Government to defray the charges which will come in course of payment during the financial year for the period ending 31st day of March 1967, in respect of 'Industries'."

DEMAND No. 25.—COMMUNITY DEVELOPMENT, ETC.

37. Community Development Projects, National Extension Service and Local Development Works.

" That a further sum not exceeding Rs. 25,00,000 be granted to the Government to defray the charges which will come in course of payment during the financial year for the period ending 31st day of March 1967, in respect of ' Community Development Projects, National Extension Service and Local Development Works '."

DEMAND No. 30-A.—ELECTRICITY SCHEMES.

45. Electricity Schemes.

" That a further sum not exceeding Rs. 4,60,000 be granted to the Government to defray the charges which will come in course of payment during the financial year for the period ending 31st day of March 1967, in respect of ' Electricity Schemes '."

DEMAND No. 31.—PUBLIC WORKS.

50. Public Works.

" That a further sum not exceeding Rs. 1,98,000 be granted to the Government to defray the charges which will come in course of payment during the financial year for the period ending 31st day of March 1967, in respect of ' Public Works '."

DEMAND No. 33.—FAMINE.

64. Famine Relief.

" That a further sum not exceeding Rs. 66,00,000 be granted to the Government to defray the charges which will come in course of payment during the financial year for the period ending 31st day of March 1967, in respect of ' Famine Relief '."

DEMAND No. 44.—INDUSTRIAL AND ECONOMIC DEVELOPMENT.

96. Capital Outlay on Industrial and Economic Development.

" That a further sum not exceeding Rs. 1,74,50,000 be granted to the Government to defray the charges which will come in course of payment during the financial year for the period ending 31st day of March 1967, in respect of ' Capital Outlay on Industrial and Economic Development '."

DEMAND No. 48.—CAPITAL OUTLAY ON PUBLIC WORKS.

103. Capital Outlay on Public Works.

" That a further sum not exceeding Rs. 5,12,100 be granted to the Government to defray the charges which will come in course of payment during the financial year for the period ending 31st day of March 1967, in respect of 'Capital Outlay on Public Works'."

DEMAND No. 54.—ADVANCES AND LOANS.

Q. Loans and Advances by State/Union Territory Governments.

" That a further sum not exceeding Rs. 90,00,200 be granted to the Government to defray the charges which will come in course of payment during the financial year for the period ending 31st day of March 1967, in respect of 'Loans and Advances by State/Union Territory Governments'."

Mr. SPEAKER.—Before we disperse for Tea, I want to suggest that the resolution and the ordinance Bill may be discussed together. On the prior occasion we had not realised any additional benefit by discussing them separately. Otherwise I am going to allow 15 minutes to the resolution and put it to vote and finish with it. Now we will adjourn for tea for 20 minutes and re-assemble thereafter.

The House adjourned for Recess at Thirty Minutes past Three of the Clock and re-assembled at Fifty Minutes past Three of the Clock.

(MR. DEPUTY SPEAKER in the Chair)

RESOLUTION DISAPPROVING THE MYSORE LAND REFORMS (AMENDMENT) ORDINANCE, 1966.

Sri S. GOPALA GOWDA.—Sir, I beg to move:

" That this House disapproves the Mysore Land Reforms (Amendment) Ordinance, 1966 (Ordinance No. 2 of 1966)."

Mr. DEPUTY SPEAKER.—Resolution moved:

" That this House disapproves the Mysore Land Reforms (Amendment) Ordinance, 1966 (Ordinance No. 2 of 1966)."